ಸಂಪುಟ : 8 ಸಂಚಿಕೆ : 209 ಪುಟ : 4 ಬೆಲೆ : 3.00 ರವಿವಾರ ಸಪ್ಟೆಂಬರ್ 24, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 209 Pages : 4 Price : 3.00 Sunday September 24, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ವಿಚಾರ ಗೋಷ್ಠಿ ನಾಳೆ

■ವಿಜಯಸಾಕ್ಷಿ ಸುದ್ದಿ, ಗದಗ

ಪೀಪಲ್ಸ್ ಫೋರಮ್ ಫಾರ್ ಕರ್ನಾಟಕ ಎಜ್ಯುಕೇಶನ್ ವತಿಯಿಂದ ಕೇಂದ್ರ ಸರ್ಕಾರ ಈಗಾಗಲೇ ದೇಶಕ್ಕೆ ಅರ್ಪಣೆ ಮಾಡಿರುವ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ಮಾಡುವ ಕುರಿತು ಶಿಕ್ಷಣ ತಜ್ಞರ ಹಾಗೂ ಆಡಳಿತ ಮಂಡಳಿಯವರ ವಿಚಾರಗೋಷ್ಠಿಯನ್ನು ಸೆ. 25ರಂದು ಸಂಜೆ 5 ಗಂಟೆಗೆ ತೋಂಟದಾರ್ಯ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್.ವಿ ಸಂಕನೂರ ವಿಷಯ ಮಂಡನೆ ಮಾಡಲಿದ್ದಾರೆ. ನಿವೃತ್ತ ಉಪ ಕುಲಪತಿಗಳಾದ ವೆಂಕಟೇಶ ರಾಯ್ಕರ, ಮಾಜಿ ಸಿಂಡಿಕೇಟ್ ಸದಸ್ಯ ಸುದೀಂದ್ರ ದೇಶಪಾಂಡೆ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಚಿಕ್ಕಟ್ಟಿ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಎಸ್.ವಾಯ್ ಚಿಕ್ಕಟ್ಟಿ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಆನಂದ ಪೋತ್ನಿಸ್, ಜಯದೇವ ಮೆಣಸಗಿ ಹಾಗೂ ಡಿ.ಬಿ ಹುಯಿಲಗೋಳ ಆಗಮಿಸುವರು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಸಂವಾದ ಜರುಗಲಿದ್ದು, ಗದಗ ಜಿಲ್ಲೆಯ ಖಾಸಗಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ಶಾಲಾ-ಕಾಲೇಜು ಪ್ರಾಂಶುಪಾಲರು, ಶಿಕ್ಷಕರು ಹಾಗೂ ಉಪನ್ಯಾಸಕರು, ವಿದ್ಯಾರ್ಥಿಗಳ ಪಾಲಕ-ಪೋಷಕರು ಭಾಗವಹಿಸಬೇಕೆಂದು ಜಿಲ್ಲೆಯ ಸಂಚಾಲಕರಾದ ಶಶಿಧರ್ ಎಲ್.ದಿಂಡೂರ, ಪುನೀತ್ ಬೆನಕನವಾರಿ, ಗಿರೀಶ ಪಂಥರ ಮತ್ತು ವಿರೇಂದ್ರ ಪಾಟೀಲ ಕೋರಿದ್ದಾರೆ.

## ನೆಲಕಚ್ಚಿದ ಚೆಂಡುಹೂವಿನ ದರ । 10 ರೂ /ಕೆ.ಜಿ ಕೂಡ ಕೇಳುವವರಿಲ್ಲ । ರೈತನ ಕನಸು ಛಿದ್ರ

# ದರದೊಂದಿಗೇ ಪಾತಾಳಕ್ಕೆ ಕುಸಿದ ಚೆಂಡು ಹೂ ಕೃಷಿಕ



ಚೆಂಡು ಹೂವಿನ ಮಾರುಕಟ್ಟೆ ಈ ಪರಿ ಕುಸಿತ ಕಂಡಿದ್ದರಿಂದ ಹೂವು ಬೆಳೆದ ರೈತರು ಮನಸೊಂದು ಕಟಾವು ಮಾಡಲೂ ಮುಂದಾಗುತ್ತಿಲ್ಲ. ಗದಗ, ಹುಬ್ಬಳ್ಳಿ ಮಾರುಕಟ್ಟೆಯಲ್ಲಿ ಖರೀದಿಯೂ ಆಗುತ್ತಿಲ್ಲ. ಮಾತುಮಾತಿಗೂ ನಮ್ಮದು ರೈತಪರ ಸರ್ಕಾರ ಎನ್ನುವ ರಾಜಕಾರಣಿಗಳಾರೂ ರೈತರ ನೋವು, ಸಂಕಷ್ಟ ಕೇಳುತ್ತಿಲ್ಲ. ಇನ್ನಾದರೂ ಸರ್ಕಾರ ಎಚ್ಚೆತ್ತು ಅನ್ನದಾತರ ನೆರವಿಗೆ ಧಾವಿಸಬೇಕಿದೆ. ಇಲ್ಲವಾದರೆ, ರೈತರ ಮಕ್ಕಳ ಉನ್ನತ ಶಿಕ್ಷಣದ ಕನಸು ಹೂವಿನಂತೆಯೇ ಬಾಡಿಹೋಗುತ್ತೆ ಎನ್ನುವ ಅಳಲು ಅನ್ನದಾತರದ್ದು.



■ವಿಜಯಸಾಕ್ಷಿ ಸುದ್ದಿ, ಗದಗ

ಶ್ರಾವಣ ಮಾಸ ಆರಂಭವಾಯಿತೆಂದರೆ, ಹಬ್ಬಗಳ ಸಾಲು. ಸಹಜವಾಗಿಯೇ ಹಣ್ಣು, ಹೂವುಗಳಿಗೆ ಉತ್ತಮ ಬೇಡಿಕೆ ವ್ಯಕ್ತವಾಗುತ್ತದೆ. ಇಂತಹ ಅಲ್ಪ ಕಾಲಾವಧಿಯ ಬೆಳೆಗಳನ್ನು ಬೆಳೆಯುತ್ತ ಆಯಾ ಕಾಲಕ್ಕೆ ಒಂದಿಷ್ಟು ಆದಾಯವನ್ನು ಕಾಣುತ್ತ, ಸಂಸಾರ ಬಂಡಿ ಸಾಗಿಸುತ್ತಿರುವ ರೈತರು ಈ ಸಮಯದಲ್ಲಿ ಹಲವಾರು ನಿರೀಕ್ಷೆಗಳ ಕನಸು ಹೆಣೆಯುತ್ತಾರೆ. ಜಮೀನಿನಲ್ಲಿ ಈಗ ಬೆಳೆದಿರುವ ಹೂವು ಅಥವಾ ಹಣ್ಣಿನ ಬೆಳೆ ಹಬ್ಬದ ಸಮಯಕ್ಕೆ ಕೈಸೇರುವಂತಾದರೆ ಉತ್ತಮ ಆದಾಯ ಗಳಿಸಬಹುದೆಂಬ ಆಸೆ ಹೊತ್ತು, ಸಾಲಸೋಲ ಮಾಡಿ, ಶ್ರಮವಹಿಸಿ ದುಡಿದು, ಲಾಭಕ್ಕಾಗಿ ಎದುರುನೋಡುತ್ತಾರೆ.

ಆದರೆ, ವಿಧಿಯಾಟಕ್ಕೆ ಇಲ್ಲೊಬ್ಬ ರೈತನ ಕನಸು ನುಚ್ಚುನೂರಾಗಿದೆ. ಭರ್ಜರಿಯಾಗಿ ಚೆಂಡು ಹೂವು ಬೆಳೆದು ಹೂವಿನಂತ ಬದುಕು ಕಟ್ಟಿಕೊಳ್ಳಬೇಕು, ಮಗಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು ಎಂದು ಕನಸು ಹೊತ್ತಿದ್ದ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಕದಾಂಪೂರ ಗ್ರಾಮದ ರೈತ ವೀರೇಶ್ ಸಾಲಿಮಠ ಇದೀಗ ದಿಕ್ಕು ಕಾಣದಂತಾಗಿದ್ದಾರೆ. ಮಗಳ ಬಿ.ಇ ಶಿಕ್ಷಣಕ್ಕಾಗಿ ಸಂಗ್ರಹಿಸಿಟ್ಟಿದ್ದ 2 ಲಕ್ಷ ರೂ. ಹಣವನ್ನೂ ಚೆಂಡು ಹೂವು ಕೃಷಿಗೆ ಬಳಕೆ ಮಾಡಿಕೊಂಡಿದ್ದ ಇವರು, ಪಾತಾಳಕ್ಕೆ ಕುಸಿದ ಚೆಂಡು ಹೂವಿನ ಬೆಲೆಯಿಂದಾಗಿ ಅಕ್ಷರಶಃ ಪಾತಾಳಕ್ಕಿಳಿಯುವಂತಾಗಿದೆ.

ರೈತ ವೀರೇಶ್ ಸಾಲಿಮಠ ಅವರಿಗೆ ನಾಲ್ಕು ಎಕರೆ ತೋಟವಿದೆ. ಶ್ರಾವಣ ಮಾಸದ ಹೊತ್ತಿಗೆ ಬೆಳೆ ಕೈಸೇರುವಂತೆ ತೋಟದಲ್ಲಿ ಚೆಂಡು ಹೂವು ಬೆಳೆದು ಹೂವಿನಂತಹ ಬದುಕು ಕಟ್ಟಿಕೊಳ್ಳಬೇಕು ಎಂದು ಎದುರು ನೋಡುತ್ತಿದ್ದರು. ಹಬ್ಬಗಳ ಸಮಯದಲ್ಲಿ ಸಹಜವಾಗಿಯೇ ಏರಿಕೆಯಾಗುವ ಬೆಲೆಯಿಂದ ಒಂದಿಷ್ಟು ಲಾಭ ಗಳಿಸಿ, ಬದುಕು ಹಸನಾಗಿಸಿಕೊಳ್ಳುವ ಉದ್ದೇಶದಿಂದ ಹಗಲು-ರಾತ್ರಿ ಎನ್ನದೇ ನೀರು ಹಾಯಿಸಿ, ಬೆವರು ಸುರಿಸಿ ದುಡಿದಿದ್ದರು. ಚೆಂಡು ಹೂವು ದೃಷ್ಟಿ ತಾಕುವಂತೆ ಬೆಳೆದಿತ್ತು. ಇವರ ನಿರಂತರ ಶ್ರಮದಿಂದ ನಾಟಿ ಮಾಡಿದ ಒಂದೆಕರೆ ಜಮೀನಿನಲ್ಲಿ ಎಲ್ಲಿ ನೋಡಿದರೂ ಹಳದಿ, ಬಂಗಾರ ಬಣ್ಣದ ಚೆಂಡು ಹೂವುಗಳು ನಗುತ್ತಿದ್ದವು.

ಆದರೆ, ನಡೆದಿದ್ದು ಮಾತ್ರ ಬೇರೆಯೇ. ಹೂವಿನ ದರ ಪಾತಾಳಕ್ಕೆ ಕುಸಿಯಿತು. ಕಳೆದ ವರ್ಷ ಗಣೇಶ ಹಬ್ಬದ ಸಂದರ್ಭದಲ್ಲಿ ಚೆಂಡು ಹೂವು ಕೆ.ಜಿಯೊಂದಕ್ಕೆ 100-150 ರೂ.ಗಳಿಗೆ ಮಾರಾಟವಾಗಿತ್ತು. ಆದರೆ, ಈ ಬಾರಿ 10 ರೂಪಾಯಿ/ಕೆ.ಜಿಗೂ ಕೇಳುವವರಿಲ್ಲ. ರೈತ ವೀರೇಶ್ ಸಾಲಿಮಠ ಹೂವಿನ ರೇಟ್ ಕೇಳಿ ಕಕ್ಕಾಬಿಕ್ಕಿಯಾಗಿದ್ದಾನೆ.

> ಯಾವ ಕಾಲೇಜಿನಲ್ಲಿ ಸೀಟ್ ಸಿಗುತ್ತೋ ಗೊತ್ತಿಲ್ಲ. ಆ ಕಾಲೇಜಿನಲ್ಲಿ ಫೀಸ್ ಕಟ್ಟಿದರೆ ಮಾತ್ರ ಪ್ರವೇಶ ಸಿಗುತ್ತದೆ. ಇಲ್ಲವೆಂದರೆ...ನಮ್ಮ ತಂದೆ ಚೆಂಡು ಹೂವು ಬೆಳೆದು ಲಾಭ ಪಡೆಯಬೇಕು ಅಂತ ಕನಸು ಕಂಡಿದ್ದರು. ಅಷ್ಟೇ ಶ್ರಮವನ್ನೂ ವಹಿಸಿದ್ದರು. ಆದರೆ, ಮಾರುಕಟ್ಟೆಯಲ್ಲಿ ದರ ತುಂಬಾ ಇಳಿದಿರುವುದರಿಂದ ಕುಟುಂಬದವರೆಲ್ಲರೂ ದಿಕ್ಕು ಕಾಣದಂತಾಗಿದ್ದೇವೆ. ಲಾಭವಿರಲಿ, ಹೂಡಿದ ಬಂಡವಾಳವೂ ಸಿಗದ ಪರಿಸ್ಥಿತಿಯಿದೆ. ಸರ್ಕಾರ ಉತ್ತಮ ಬೆಂಬಲ ಬೆಲೆಯಲ್ಲಿ ಖರೀದಿ ಮಾಡಬೇಕು. ಇಲ್ಲವಾದರೆ, ರೈತರ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗುತ್ತದೆ.
>
> **– ಗೀತಾ ಸಾಲಿಮಠ.**
> ರೈತ ವೀರೇಶ್ ಸಾಲಿಮಠರ ಪುತ್ರಿ.

ಈಗ ಮಗಳು ಸಿಇಟಿಯಲ್ಲೂ ಉತ್ತಮ ರ್‍ಯಾಂಕ್ ಪಡೆದಿದ್ದು, ಬಿಇ ಕಂಪ್ಯೂಟರ್ ಸೈನ್ಸ್ ಸೀಟ್ ಪಡೆದಿದ್ದಾಳೆ. ಸೋಮವಾರದೊಳಗೆ 1.4 ಲಕ್ಷ ರೂ ಶುಲ್ಕ ಕಟ್ಟಲೇಬೇಕಾದ ಸಂದಿಗ್ಧ ಸ್ಥಿತಿ ಎದುರಿಸುತ್ತಿದ್ದಾರೆ.

## ನಾಳೆ ಆಕಾಶವಾಣಿಯಲ್ಲಿ ಡಾ.ಪುಟ್ಟರಾಜರ ಕೀರ್ತನೆ



■ವಿಜಯಸಾಕ್ಷಿ ಸುದ್ದಿ, ಗದಗ

ಡಾ. ಪಂ.ಪುಟ್ಟರಾಜ ಕವಿ ಗವಾಯಿಗಳವರ 13ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ಗುರು ಪುಟ್ಟರಾಜರ ಶಿಷ್ಯರೂ, ಆಕಾಶವಾಣಿ 'ಬಿ' ಹೈ ಶ್ರೇಣಿ ಕಲಾವಿದರೂ ಆದ ಸಿದ್ಧೇಶ್ವರ ಶಾಸ್ತ್ರೀ ತೆಲ್ಲೂರ ಅವರು ಪ್ರಸ್ತುತಪಡಿಸಿದ ಶ್ರೀ ಗುರು ಪುಟ್ಟರಾಜರ ಕೀರ್ತನೆಯು ಸೆ. 25ರಂದು ಮುಂಜಾನೆ 11 ಗಂಟೆಗೆ ಧಾರವಾಡ ಆಕಾಶವಾಣಿ ಕೇಂದ್ರದಿಂದ ಪ್ರಸಾರಗೊಳ್ಳಲಿದೆ.

ಕೀರ್ತನೆಗೆ ಕಲಾವಿದರಾದ ಶಂಕರ್ ಕಬಾಡಿ ವಯೋಲಿನ್, ಶಾಂತಲಿಂಗಪ್ಪ ದೇಸಾಯಿ ಕಲ್ಲೂರ ಅವರು ತಬಲಾ ಸಾಥ್ ನೀಡಿದ್ದು, ಆಸಕ್ತರು ಆಲಿಸಲು ಕೋರಲಾಗಿದೆ.

## ಶ್ರೀರಾಮ ಸೇನಾದ ಸಂಸ್ಥಾಪಕ ಪ್ರಮೋದ ಮುತಾಲಿಕ ವಿರುದ್ಧ ಪ್ರಕರಣ । ಗದುಗಿನಲ್ಲಿ ಪ್ರತಿಭಟನೆ

# ಮುಂದೊಂದು ದಿನ ಸತ್ಯ ಹೊರಬರುತ್ತದೆ



ಶ್ರೀರಾಮ ಸೇನೆಯ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ ಮೇಲೆ ದಾಖಲಾಗಿರುವ ಪ್ರಕರಣವನ್ನು ಸರಕಾರ ಕೂಡಲೇ ವಾಪಸ್ಸು ಪಡೆಯಬೇಕು. ಒಂದು ವೇಳೆ ಸರಕಾರ ಪ್ರಕರಣ ವಾಪಸ್ಸು ಪಡೆಯದಿದ್ದಲ್ಲಿ ಶ್ರೀರಾಮ ಸೇನಾ ಕಾರ್ಯಕರ್ತರು ರಾಜ್ಯಾದ್ಯಂತ ಸರಣಿ ಉಪವಾಸ, ಧರಣಿ, ಸತ್ಯಾಗ್ರಹಗಳಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವದು ಅನಿವಾರ್ಯವಾಗಲಿದೆಯೆಂದು ಎಚ್ಚರಿಸಿದರು.

■ವಿಜಯಸಾಕ್ಷಿ ಸುದ್ದಿ, ಗದಗ

ಹುಬ್ಬಳ್ಳಿಯ ಕಿತ್ತೂರ ಚನ್ನಮ್ಮ ಮೈದಾನದಲ್ಲಿ ಗಣೇಶೋತ್ಸವ ಆಚರಣೆಯಲ್ಲಿ ಶ್ರೀರಾಮ ಸೇನೆಯ ಸಂಸ್ಥಾಪಕ ಪ್ರಮೋದ ಮುತಾಲಿಕ ಅವರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ ಪೊಲೀಸರ ಕ್ರಮವನ್ನು ಖಂಡಿಸಿ ಶ್ರೀರಾಮ ಸೇನೆಯ ಕಾರ್ಯಕರ್ತರು ಶನಿವಾರ ಗದುಗಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಇಲ್ಲಿಯ ಹುಯಿಲಗೋಳ ನಾರಾಯಣರಾವ್ ವರ್ತುಳದಲ್ಲಿ ಸೇರಿದ ಶ್ರೀರಾಮ ಸೇನೆಯ ನೂರಾರು ಕಾರ್ಯಕರ್ತರು ರಾಜ್ಯ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀರಾಮ ಸೇನೆಯ ರಾಜ್ಯ ಕಾರ್ಯದರ್ಶಿ ರಾಜೂ ಖಾನಪ್ಪನವರ, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬಂದ ನಂತರ ಹಿಂದೂ ಸಂಘಟನೆಗಳ ಮುಖಂಡರು, ಕಾರ್ಯಕರ್ತರನ್ನು ಗುರಿಯಾಗಿಸಲಾಗುತ್ತಿದೆ.

ಹಿಂದೂ ಸಂಘಟನೆಗಳ ಮುಖಂಡರು, ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ವಿನಾಕಾರಣ ತೊಂದರೆ ನೀಡಲಾಗುತ್ತಿದೆಯೆಂದು ಆರೋಪಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಲೆಲ್ಲಾ ಹಿಂದೂ ಸಂಘಟನೆಗಳ ಮುಖಂಡರ ಮೇಲೆ ಸುಳ್ಳು ಪ್ರಕರಣ ದಾಖಲಿಸುವ ಪರಂಪರೆ ನಡೆದಿದೆ. ▸▸3 ನೇ ಪುಟಕ್ಕೆ

## ಮಕ್ಕಳ ಬೆಳವಣಿಗೆಗೆ ಪೋಷಣ ಅಭಿಯಾನ ಸಹಕಾರಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಅಪೌಷ್ಠಿಕತೆ, ರಕ್ತ ಹೀನತೆ ಹಾಗೂ ಕುಂಠಿತ ಬೆಳವಣಿಗೆ ಹೊಂದಿರುವ ಮಕ್ಕಳು, ಮಹಿಳೆಯರು ಸಮಸ್ಯೆಯಿಂದ ತಪ್ಪಿಸಿಕೊಳ್ಳಲು ಪೌಷ್ಠಿಕ ಆಹಾರ ಸೇವನೆ ಮುಖ್ಯವಾಗಿದೆ ಎಂದು ಗದಗ ಶಿಶು ಅಭಿವೃದ್ಧಿ ಸಹಾಯಕ ಅಧಿಕಾರಿ ಮಂಜುಳಾ ಕಮತ ಹೇಳಿದರು.

ಅವರು ಪಟ್ಟಣದ ಅಂಗನವಾಡಿ ಸಂಖ್ಯೆ 140ರಲ್ಲಿ ಪೋಷಣ್ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಕ್ಕಳಲ್ಲಿನ ಅಪೌಷ್ಠಿಕತೆ ಹೋಗಲಾಡಿಸುವುದು, ಕುಂಠಿತ ಬೆಳವಣಿಗೆ, ಮಕ್ಕಳ ಸರ್ವತೋಮುಖ ಅಭಿವೃದ್ಧಿ, ರಕ್ತ ಹೀನತೆಯಿಂದ ಬಳಲುವ ಕಿಶೋರಿಯರು, ಮಹಿಳೆಯರು, ಗರ್ಭಿಣಿಯರ ಆರೋಗ್ಯ ಕಾಪಾಡುವ ಉದ್ದೇಶದಿಂದ ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಈ ಅಭಿಯಾನ ನಡೆಸಲಾಗುತ್ತಿದೆ ಎಂದರು. ಪ.ಪಂ ಉಪಾಧ್ಯಕ್ಷೆ ಉಮಾ ಮಟ್ಟಿ, ಮುಳಗುಂದ ಅಂಗನವಾಡಿ ಮೇಲ್ವಿಚಾರಕಿ ಗೀತಾ ದ್ಯಾಮನಗೌಡರ, ತ್ರಿವೇಣಿ ಸವದಿ, ಎಂ.ಎಂ ಅಬ್ಬುನವರ, ಆಯ್. ಆಯ್ ಚಿಂಚಲಿ, ವಿನೋದಾ ಕುರಂದವಾಡ, ಶಾಹಿದಾ ಹಣಗಿ, ಶೋಭಾ ಆರಾಧ್ಯಮಠ, ಪುಷ್ಪಾ ಮಾದಮ್ಮನವರ, ವಿದ್ಯಾ ಸೊರಟೂರ, ಸಂಗಮ್ಮಾ ಶ್ಯಾವಿ, ನೇತ್ರಾವತಿ ಜಾಧಾವ ಇದ್ದರು.

## ಶ್ರೀ ಗುರುಮೃತ್ಯುಂಜಯ ಅಪ್ಪನವರ 120ನೇ ಸ್ಮರಣೋತ್ಸವ ಇಂದು



■ವಿಜಯಸಾಕ್ಷಿ ಸುದ್ದಿ, ಗದಗ

ಮಣಕವಾಡದ ಮಹಿ ಮಾಪುರುಷ ಶ್ರೀ ಗುರುಮೃತ್ಯುಂಜಯ ಮಹಾಸ್ವಾಮಿಗಳ 120ನೇ ಸ್ಮರಣೋತ್ಸವ ಕಾರ್ಯಕ್ರಮವು ರವಿವಾರ ಮುಂಜಾನೆ 11 ಗಂಟೆಗೆ ನಗರದ ಲಖಾಣಿ ಆಸ್ಪತ್ರೆ ಎದುರುಗಿನ ಶ್ರೀ ಗುರುಮೃತ್ಯುಂಜಯ ಗುರುಕುಲ ಆಶ್ರಮದ ಸಭಾಭವನದಲ್ಲಿ ಜರುಗಲಿದೆ.

ಹಿರಿಯ ಸಾಹಿತಿಗಳಾದ ಐ.ಕೆ ಕಮ್ಮಾರ ಸಮಾರಂಭದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಿಂಡಿಕೇಟ್ ಬ್ಯಾಂಕ್ ನಿವೃತ್ತ ಅಧಿಕಾರಿ ಅಶೋಕ ಕೊಡಗಲಿ ಪಾಲ್ಗೊಳ್ಳುವರು. ಪ್ರೊಬಸ್ ಕ್ಲಬ್ ಅಧ್ಯಕ್ಷ ಬಿ.ಬಿ ತೋಟಗೇರ ಹಾಗೂ ಕೋಶಾಧ್ಯಕ್ಷ ವ್ಹಿ.ಎಚ್ ಪಾಟೀಲ ಇವರನ್ನು ಈ ಸಂದರ್ಭದಲ್ಲಿ ಸತ್ಕರಿಸಿ ಗೌರವಿಸಲಾಗುವುದು. ಜೆ.ಜಿ ಪಾಟೀಲ ಭಕ್ತಿ ಸೇವೆ ವಹಿಸಿಕೊಂಡಿದ್ದಾರೆ.

ಈ ಪುಣ್ಯ ಕಾರ್ಯದಲ್ಲಿ ಪಾಲ್ಗೊಂಡು ಶ್ರೀ ಗುರುಮೃತ್ಯುಂಜಯ ಅಪ್ಪನವರ ಕೃಪೆಗೆ ಪಾತ್ರರಾಗಲು ಆಶ್ರಮದ ವಿದ್ಯಾರ್ಥಿಗಳಾದ ಕೋಮಲ, ಅಮೃತಾ, ವಿಜಯಲಕ್ಷ್ಮೀ, ಸಿಮ್ರಾನ್, ಆಲಮ್, ಅಕ್ರಮ್, ಅಸ್ಲಂ, ಬಸು ಹಿರೇಮಠ, ಸ್ನೇಹ ಬಡಿಗೇರ ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ಅನ್ವರ ಶಿರಹಟ್ಟಿಯವರಿಗೆ 'ಪ್ರೈಡ್ ಆಫ್ ಕರ್ನಾಟಕ' ಪ್ರಶಸ್ತಿ



■ವಿಜಯಸಾಕ್ಷಿ ಸುದ್ದಿ, ಗದಗ

ಬೆಂಗಳೂರು ಮೂಲದ ANYELP GROUPಸಂಸ್ಥೆಯ ವತಿಯಿಂದ ಸಾಮಾಜಿಕ ಕಾರ್ಯಕರ್ತರು, ಬೀದಿ ಬದಿ ವ್ಯಾಪಾರಿ ಸಂಘಟನೆ ನಾಸ್ವಿ ಕರ್ನಾಟಕ ರಾಜ್ಯ ಸಂಚಾಲಕ ಮತ್ತು ಅನೇಕ ಸಂಘ-ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ತಮ್ಮನ್ನು ಗುರುತಿಸಿಕೊಂಡಿರುವ ನಗರದ ಅನ್ವರ ಶಿರಹಟ್ಟಿ ವರ್ಷದ ಸಾಮಾಜಿಕ ಕಾರ್ಯಕರ್ತ ವಿಭಾಗದಡಿ 'ಪ್ರೈಡ್ ಆಫ್ ಕರ್ನಾಟಕ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭವು ಬೆಂಗಳೂರಿನಲ್ಲಿ ಸೆ. 29ರಂದು ನಡೆಯಲಿದೆ.

## ರೋಟರಿ ಕ್ಲಬ್‌ನಿಂದ ಉಚಿತ ಕಣ್ಣಿನ ತಪಾಸಣೆ



■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಪಟ್ಟಣದ ರೋಟರಿ ಕ್ಲಬ್ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಹಾಗೂ ಕಣ್ಣಿನ ಪೊರೆ ಶಸ್ತ್ರಚಿಕಿತ್ಸಾ ಶಿಬಿರ ಸೆ.25ರಂದು ಸ್ಥಳೀಯ ಸರ್ಕಾರಿ ಆಸ್ಪತ್ರೆಯಲ್ಲಿ ನಡೆಯಲಿದ್ದು, ತಾಲೂಕಿನ ಜನತೆ ಶಿಬಿರದ ಸದುಪಯೋಗ ಪಡೆದುಕೊಳ್ಳಲು ಮುಂದಾಗಬೇಕು ಎಂದು ಇಲ್ಲಿನ ರೋಟರಿ ಸಂಘದ ಅಧ್ಯಕ್ಷ ಸುರೇಶ ರಂಗ್ರೇಜ ಹೇಳಿದರು.

ಸ್ಥಳೀಯ ರೋಟರಿ ಶಾಲೆಯಲ್ಲಿ ಶನಿವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಂ.ಎಂ ಜೋಶಿ ಆಸ್ಪತ್ರೆ ಹುಬ್ಬಳ್ಳಿ ಹಾಗೂ ಗಜೇಂದ್ರಗಡ ಸರ್ಕಾರಿ ಆಸ್ಪತ್ರೆಯ ಸಹಯೋಗದಲ್ಲಿ ನಡೆಯಲಿರುವ ಉಚಿತ ಕಣ್ಣಿನ ತಪಾಸಣೆ ಹಾಗೂ ಕಣ್ಣಿನ ಪೊರೆ ಶಸ್ತ್ರಚಿಕಿತ್ಸಾ ಶಿಬಿರವು ಸೆ.25ರ ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ತಪಾಸಣೆಗೆ ಆಗಮಿಸುವವರು ಕಡ್ಡಾಯವಾಗಿ ಆಧಾರ್ ಕಾರ್ಡ್ ಮತ್ತು ಬಿಪಿಎಲ್ ಕಾರ್ಡ್ ತರಬೇಕು. ತಪಾಸಣೆ ವೇಳೆ ಆಪರೇಶನ್‌ಗೆ ಒಳಪಡುವ ವ್ಯಕಿಗಳನ್ನು ಸೋಮವಾರ ಸಂಜೆ ಹುಬ್ಬಳ್ಳಿಯ ಎಂ.ಎಂ ಜೋಶಿ ಆಸ್ಪತ್ರೆಗೆ ಕಳುಹಿಸಲಾಗುವುದು ಎಂದರು. ರೋಟರಿ ಕ್ಲಬ್‌ನ ಮಾಜಿ ಅಧ್ಯಕ್ಷ, ವಕೀಲ ಆರ್.ಎಂ ರಾಯಬಾಗಿ ಮಾತನಾಡಿ, ಕಣ್ಣಿನ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯ ತೋರುವುದು ಸರಿಯಲ್ಲ. ಹೀಗಾಗಿ ಸಮಸ್ಯೆಗಳು ಸಣ್ಣದಿದ್ದಾಗ ಪರಿಹಾರ ಕಂಡುಕೊಳ್ಳುವುದು ಉತ್ತಮವಾಗಿದ್ದು, ರೋಟರಿ ಕ್ಲಬ್‌ನಿಂದ ನಡೆಯುತ್ತಿರುವ ನೇತ್ರ ತಪಾಸಣೆ ಹಾಗೂ ಕಣ್ಣಿನ ಪೊರೆಯ ತಪಾಸಣೆ ಉಚಿತವಾಗಿ ನಡೆಯಲಿದೆ. ಹೀಗಾಗಿ ಕಾರ್ಯಕ್ರಮದ ಆಶಯವನ್ನು ಯಶಸ್ವಿಗೊಳಿಸುವುದರೊಂದಿಗೆ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಶಿಬಿರದ ಸದ್ಬಳಕೆ ಮಾಡಿಕೊಳ್ಳಲು ಜನತೆ ಮುಂದಾಗಬೇಕು ಎಂದರು.

ಈ ವೇಳೆ ಗೋವಿಂದ ಮಂತ್ರಿ, ಲಕ್ಷ್ಮಣ ರಂಗ್ರೇಜ, ಗಣೇಶ ರಾಯಬಾಗಿ ಸೇರಿದಂತೆ ಇತರರು ಇದ್ದರು.

## ತಮಿಳುನಾಡಿಗೆ ಕಾವೇರಿ ನೀರು ಬಿಡದಂತೆ ಕರವೇ ಮನವಿ

■ವಿಜಯಸಾಕ್ಷಿ ಸುದ್ದಿ, ಗದಗ

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುವುದನ್ನು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಗದಗ ಜಿಲ್ಲಾ ಘಟಕದ ಪದಾಧಿಕಾರಿಗಳು ಶನಿವಾರ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕರವೇ ಗದಗ ಜಿಲ್ಲಾಧ್ಯಕ್ಷ ದಾವಲ್‌ಸಾಬ್ ಆರ್ ಮುಳುಗುಂದ, ಈಗಾಗಲೇ ಅನಾವೃಷ್ಟಿಯಿಂದ ರಾಜ್ಯದ 195ಕ್ಕೂ ಹೆಚ್ಚು ತಾಲೂಕುಗಳಲ್ಲಿ ಬರಗಾಲ ಎಂದು ರಾಜ್ಯ ಸರ್ಕಾರ ಘೋಷಿಸಿದೆ. ಮಳೆಯ ಕೊರತೆಯಿಂದಾಗಿ ರಾಜ್ಯದ ಬಹುತೇಕ ಡ್ಯಾಮ್‌ಗಳು ಖಾಲಿಯಾಗಿದ್ದು, ಜನರಿಗೆ ಕುಡಿಯುವ ನೀರಿನ ಸಮಸ್ಯೆ ಹಾಗೂ ರೈತರಿಗೆ ತೀವ್ರ ತೊಂದರೆ ಆಗಿದೆ. ಕೂಡಲೇ ರಾಜ್ಯ ಸರ್ಕಾರವು ತಮಿಳುನಾಡಿಗೆ ನೀರು ಬಿಡುವುದನ್ನು ನಿಲ್ಲಿಸಿ, ರಾಜ್ಯದ ರಾಜ್ಯದ ಜನರ ಹಾಗೂ ರೈತರ ಬಗ್ಗೆ ಯೋಚನೆ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಗದಗ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ ವೆಂಕಟೇಶ್ ಬೇಲೂರ್, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ಭಂಡಾರಿ, ಸಂಘಟನಾ ಕಾರ್ಯದರ್ಶಿ ಸಹದೇವ ಕೋಟಿ, ಕಾನೂನು ಸಲಹೆಗಾರರಾದ ಮಂಜುನಾಥ ಶಾಂತಗೇರಿ, ಕಾರ್ಯದರ್ಶಿ ಮಂಜುನಾಥ ಭಾಗಿ, ಕಾರ್ಮಿಕ ಘಟಕದ ಅಧ್ಯಕ್ಷರಾದ ತಿಮ್ಮಣ್ಣ ದೋಣಿ, ತಾಲೂಕಾ ಅಧ್ಯಕ್ಷರಾದ ಪರಶುರಾಮ್ ಬಂಕದಮನಿ, ಪ್ರಧಾನ ಕಾರ್ಯದರ್ಶಿ ಹನುಮಂತ ಸಿದ್ದಿಂಗ, ಉಪಾಧ್ಯಕ್ಷರಾದ ವೆಂಕಟೇಶ್ ಗುಜಮಾಗಡಿ, ಸಹ-ಕಾರ್ಯದರ್ಶಿ ಮಂಜುನಾಥ ಚುಳಕಿ, ಯುವ ಘಟಕದ ಅಧ್ಯಕ್ಷ ಮಣಿಕಂಠ ಭಂಡಾರಿ ಮುಂತಾದವರು ಉಪಸ್ಥಿತರಿದ್ದರು.



## ಸೆ.30ರವರೆಗೆ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಉಪನೋಂದಣಾಧಿಕಾರಿಗಳ ಕಚೇರಿ ಕಾರ್ಯನಿರ್ವಹಣೆ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕೇಂದ್ರ ಮೌಲ್ಯ ಮಾಪನ ಸಮಿತಿಯ ( Valuation Committee) 2023-24ನೇ ಸಾಲಿನಲ್ಲಿ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯ ಮಾರ್ಗಸೂಚ ದರಗಳನ್ನು ಪರಿಷ್ಕರಣೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ನೋಂದಣಿಗೆ ಹಾಜರುಪಡಿಸುವ ದಸ್ತಾವೇಜುಗಳ ಸಂಖ್ಯೆ ಹೆಚ್ಚಾಗುವ ಸಾಧ್ಯತೆಗಳು ಇರುತ್ತವೆ. ಸಾರ್ವಜನಿಕ ಹಿತದೃಷ್ಟಿಯಿಂದ ರಾಜ್ಯದ ಎಲ್ಲಾ ಉಪನೋಂದಣಿ ಕಚೇರಿಗಳ ಕೆಲಸದ ಅವಧಿಯನ್ನು ಸೆ.23 ರಿಂದ ಜಾರಿಗೆ ಬರುವಂತೆ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ಕಾರ್ಯ ನಿರ್ವಹಿಸಲು ಕಚೇರಿ ಅವಧಿಯನ್ನು ವಿಸ್ತರಿಸಿ ಆದೇಶಿಸಲಾಗಿದೆ.

ಸೆಪ್ಟೆಂಬರ್ 23 ನಾಲ್ಕನೇ ಶನಿವಾರವದಂದೂ ಕೂಡ ಈ ಅವಧಿಯಲ್ಲಿ ಕಾರ್ಯ ನಿರ್ವಹಿಸಲಾಗುವುದು. ಈ ಕೆಲಸದ ಅವಧಿಯು ಸೆ.30 ರವರೆಗೆ ಮಾತ್ರ ಜಾರಿಯಲ್ಲಿರುತ್ತದೆ.

ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದು ಎಂದು ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರಾದ ಬಿ.ಆರ್.ಮಮತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಚೀನಾದ ಹ್ಯಾಂಗ್ ಝೌನಲ್ಲಿ ಇಂದು ಏಷ್ಯನ್ ಗೇಮ್ಸ್ ಕ್ರೀಡಾಕೂಟ 2023ಕ್ಕೆ ಅದ್ದೂರಿ ಚಾಲನೆ ನೀಡಲಾಯಿತು. ಭಾರತೀಯ ಕ್ರೀಡಾಪಟುಗಳು ಸಾಂಪ್ರದಾಯಿಕ ಉಡುಗೆಯಲ್ಲಿ ಮಿಂಚಿದರು.

## ಬಿಗ್ ಬಾಸ್ ಕನ್ನಡ 10ನೇ ಸೀಸನ್ ಆರಂಭಕ್ಕೆ ಡೇಟ್ ಫಿಕ್ಸ್!

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕನ್ನಡದ ಕಿರುತೆರೆಯ ವೀಕ್ಷಕರು ಕಾಯುತ್ತಿದ್ದ ಮಹತ್ವದ ಅಪ್‌ಡೇಟ್ ಸಿಕ್ಕಿದೆ. ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್ ನಡೆಸಿಕೊಡುವ ಬಿಗ್ ಬಾಸ್ ಕನ್ನಡದ 10ನೇ ಆವೃತ್ತಿಯ ಡೇಟ್ ಫಿಕ್ಸ್ ಆಗಿದೆ.

ಬಿಗ್ ಬಾಸ್ ಕುರಿತಾದ ಪ್ರೋಮೋ ಹೊರಬಂದಾಗೆಲ್ಲಾ, 10ನೇ ಸೀಸನ್ ಯಾವಾಗ ಶುರುವಾಗಲಿದೆ ಎಂದು ವೀಕ್ಷಕರು ಕೇಳುತ್ತಲೇ ಇದ್ದರು. ಅದಕ್ಕೆ ಉತ್ತರ ಎನ್ನುವಂತೆ ಕಲರ್ಸ್ ಕನ್ನಡ ತನ್ನ ಸೋಶಿಯಲ್ ಮೀಡಿಯಾ ಪೇಜ್‌ಗಳಲ್ಲಿ ಬಿಗ್ ಅಪ್‌ಡೇಟ್ ನೀಡಿದೆ.

ಇಂದಿನಿಂದ ಸರಿಯಾಗಿ 16 ದಿನಗಳಲ್ಲಿ 10ನೇ ಆವೃತ್ತಿಯ ಬಿಗ್ ಬಾಸ್ ಕನ್ನಡ ಶೋ ಆರಂಭವಾಗಲಿದೆ. ಈಗಾಗಲೇ ತಿಳಿಸಿರುವಂತೆ ಈ ಬಾರಿಯದ್ದು ಹ್ಯಾಪಿ ಬಿಗ್‌ಬಾಸ್ ಥೀಮ್‌ನಲ್ಲಿ ನಡೆಯಲಿದೆ. ಅಕ್ಟೋಬರ್ 8 ರಿಂದ ದೊಡ್ಮನೆ ಕಾರ್ಯಕ್ರಮ ಬಿಗ್ ಬಾಸ್ ಆರಂಭವಾಗಲಿದೆ.

**ಊರ ಹಬ್ಬಕ್ಕೆ ಇಲ್ಲಿದೆ ರೀಸನ್;** ಶುರುವಾಗ್ತಿದೆ ಹ್ಯಾಪಿ 'ಬಿಗ್‌ಬಾಸ್ ಕನ್ನಡ' ಹತ್ತನೇ ಸೀಸನ್ ಅಕ್ಟೋಬರ್ 8 ರಿಂದ ಎಂದು ಮಾಹಿತಿಯನ್ನು ಪ್ರೋಮೊ ಜತೆಗೆ ಕಲರ್ಸ್ ಕನ್ನಡ ಹಂಚಿಕೊಂಡಿದೆ. ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಕಟವಾಗುವ ಮೋಸ್ಟ್ ಪಾಪ್ಯುಲರ್ ಕಾರ್ಯಕ್ರಮ ಈ ಬಾರಿ 10ನೇ ವರ್ಷಕ್ಕೆ ಕಾಲಿಟ್ಟಿದೆ. ಈ ಹಿನ್ನೆಲೆಯಲ್ಲಿ ಸಾಕಷ್ಟು ಕೌತುಕ ಮೂಡಿಸಿದೆ. ಅದರೊಂದಿಗೆ ಬಿಗ್ ಬಾಸ್ 10 ಕನ್ನಡ ಕುರಿತಾಗಿ ಕೆಲವೊಂದು ಎಕ್ಸ್‌ಕ್ಲೂಸಿವ್ ಮಾಹಿತಿ ಕೂಡ ಲಭ್ಯವಾಗಿದೆ. ಅಕ್ಟೋಬರ್ 8 ರಂದು ಕಾರ್ಯಕ್ರಮ ಪ್ರಸಾರವಾಗಲಿದ್ದರೆ, ಅಕ್ಟೋಬರ್ 7 ರಂದು ಇದರ ಲಾಂಚ್ ಶೂಟಿಂಗ್ ನಡೆಯಲಿದೆ ಎಂದು ವರದಿಯಾಗಿದೆ.



**ಮುಂಡರಗಿ:** ಶ್ರೀ ದ್ಯಾಮ್ಮಮ್ಮ ದೇವಿ ಕೋಟೆ ಬಾಗ ಕನ್ನಡಿಗ ಯುವ ಶಕ್ತಿ ಶ್ರೀ ಗಜಾನನ ಗೆಳೆಯರ ಬಳಗದ ವತಿಯಿಂದ ಪ್ರತಿಷ್ಠಾಪಿಸಿದ ವಿನಾಯಕ

### 'ಎಂಟು ತಂತಿ-ಕನ್ನಡ ಜ್ಞಾನಪೀಠ ದರ್ಶನಂ' ದೃಶ್ಯಕಾವ್ಯ ಕಾರ್ಯಕ್ರಮದಲ್ಲಿ ಅಂದಾನೆಪ್ಪ ವಿಭೂತಿ

# ಮನುಷ್ಯ ನಿಶ್ಚಿಂತನಾಗುವದನ್ನು ರೂಢಿಸಿಕೊಳ್ಳಬೇಕು

■ ವಿಜಯಸಾಕ್ಷಿ ಸುದ್ದಿ, ಗದಗ

ಇಂದಿನ ವಾಣಿಜ್ಯೀಕರಣದ ದಿನಮಾನದಲ್ಲಿ ವೇಗದ ಬದುಕು, ಆಡಂಬರ ಮತ್ತು ಒತ್ತಡದ ಮನಸ್ಥಿತಿಯಿಂದ, ಲಾಭವೆಂಬ ಲೋಭಿತನದಲ್ಲಿ ಸಂಬಂಧದ ಸಾತ್ವಿಕ ಗುಣ ಮಾಯವಾಗಿ ಕೇವಲ ಹಣದ ಅಮಲಿನಿಂದ ಜೀವನ ನಾಗಾಲೋಟದ ಕುದುರೆಯಾಗಿದೆ. ಇದರಿಂದ ಮನುಷ್ಯ ಎಲ್ಲರನ್ನೂ ಅಭಿಮಾನ, ಪ್ರೀತಿ, ಕರುಣೆಯಿಂದ ನೋಡುವ ಕಾಲ ದೂರವಾಗಿದೆ. ಸತ್ಯ, ಶಾಂತಿ ಪ್ರೀತಿಯನ್ನು ಮರೆಯುತಿದ್ದಾನೆ. ಮನುಷ್ಯ ನಿಶ್ಚಿಂತನಾಗಬೇಕಾದರೆ ಬೇರೆಯವನ್ನು ಗೌರವದಿಂದ ಕಾಣಬೇಕು. ಅಭಿನಂದಿಸುವ ಗುಣವಿರಬೇಕು, ಬೇಡವಾದ ಮನಸ್ಥಿತಿಯನ್ನು ದೂರವಿಟ್ಟು ಒಳ್ಳೆಯ ಸಾತ್ವಿಕ ಗುಣಗಳನ್ನು ರೂಢಿಸಿಕೊಳ್ಳಬೇಕು. ಆಗ ಮಾತ್ರ ಆರೋಗ್ಯಪೂರ್ಣ ಸಮಾಜ ಮತ್ತು ವ್ಯಕ್ತಿಯನ್ನು ಕಾಣಲು ಸಾಧ್ಯ ಎಂದು




ಹಿರಿಯ ಸಾಹಿತಿ ಅಂದಾನೆಪ್ಪ ವಿಭೂತಿ ಅಭಿಪ್ರಾಯಪಟ್ಟರು.

ನಗರದ ಕೃಷ್ಣ ಗ್ರಾಮೀಣಾಭಿವೃದ್ಧಿ ಶಿಕ್ಷಣ ಸಂಸ್ಥೆ ಹಾಗೂ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಗದಗ ಇವುಗಳ ಸಹಯೋಗದಲ್ಲಿ ಆಯೋಜಿಸಿದ್ದ 'ಎಂಟು ತಂತಿ-ಕನ್ನಡ ಜ್ಞಾನಪೀಠ ದರ್ಶನಂ' ದೃಶ್ಯಕಾವ್ಯ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತು ಉತ್ತಮವಾದ ಕಾರ್ಯಕ್ರಮವನ್ನು ಆಯೋಜಿಸುತ್ತ ಜ್ಞಾನಪೀಠ ಪುರಸ್ಕೃತರನ್ನು ಮಕ್ಕಳಿಗೆ ಪರಿಚಯಿಸುವ ಉದ್ದೇಶವನ್ನು ಹೊಂದಿ, ವೇಷಭೂಷಣದ ಮೂಲಕ ಅವರನ್ನು ಪರಿಚಯಿಸುವದು ಮತ್ತು ಕಾವ್ಯ ವಾಚಿಸುವ ಮೂಲಕ ದಿಗ್ಗಜರನ್ನು ನೆನಪಿಸುವ ಈ ಪರಿಕಲ್ಪನೆ ಅತ್ಯಂತ ಸಮರ್ಪಕವಾಗಿದೆ. ಕೃಷ್ಣ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳ ಶ್ರೇಯಸ್ಸಿಗೆ ಶ್ರಮಿಸುತ್ತಿದೆ. ಹಗಲು-ರಾತ್ರಿಯನ್ನದೆ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಪ್ರಿಯಾ ಹುಯಿಲಗೋಳ ದುಡಿಯುತ್ತಿದ್ದಾರೆ. ಮಕ್ಕಳ ಸರ್ವಾಂಗೀಣ ಪ್ರಗತಿಗಾಗಿ ವಿಶೇಷ ಚಟುವಟಿಕೆಗಳನ್ನು ರೂಪಿಸಿ, ಉತ್ತಮ ಅಂಕ ಪಡೆಯುವಲ್ಲಿ ಪ್ರೇರೇಪಿಸುತಿದ್ದಾರೆ. ಇದರಂತೆ ವಿದ್ಯಾರ್ಥಿಗಳನ್ನು ಉತ್ತೇಜಿಸಿ ಹಿಂದುಳಿದ ವಿದ್ಯಾರ್ಥಿಗಳನ್ನು ಬೆಳೆಸುವಲ್ಲಿ ಶ್ರಮಿಸಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷ್ಣ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಪ್ರಿಯಾ ಹುಯಿಲಗೋಳ ವಹಿಸಿದ್ದರು. ಕಸಾಪ ಅಧ್ಯಕ್ಷರಾದ ಡಾ. ರಶ್ಮಿ ಅಂಗಡಿ, ಅತಿಥಿಗಳಾಗಿ ಲೀಲಾಬಾಯಿ ದಪ್ತೆರದಾರ, ಯಲ್ಲಪ್ಪ ಮಾಸ್ತರ ಪಾಲ್ಗೊಂಡಿದ್ದರು. ದಾನಮ್ಮ ಪೂಜಾರ, ಶ್ರೀನಿವಾಸ ತಂಬ್ರಳ್ಳಿ, ಅನ್ವಿತಾ ಹುಯಿಲಗೋಳ, ಹಯವದನ, ಕುಲಕರ್ಣಿ, ಸಂಗಮೇಶ, ಎಸ್.ವೈಷ್ಣವಿ, ಸೃಷ್ಟಿ ಕೊರ್ಲಳ್ಳಿ, ಸ್ನೇಹ ಬೂದೂರ ಜ್ಞಾನಪೀಠ ಪುರಸ್ಕೃತರ ವೇಷ-ಭೂಷಣದೊಂದಿಗೆ ವಾಚನ ಮಾಡಿದರು. ಪ್ರತಿಭಾನ್ವಿತ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಸಂಜೀವ ಸ್ವಾಗತಿಸಿ ಪರಿಚಯಿಸಿದರು. ಕಸಾಪ ಕಾರ್ಯದರ್ಶಿ ಬಸವರಾಜ ನೆಲಜೇರಿ ನಿರೂಪಿಸಿದರು. ಪವಮಾನ ನಾಮಾವಳಿ ವಂದಿಸಿದರು.

ಅತಿಥಿಗಳಾಗಿ ಪಾಲ್ಗೊಂಡಿದ್ದ ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ರಾಜೇಂದ್ರ ಗಡಾದ ಮಾತನಾಡಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಸಾಮೀಪ್ಯ ಮತ್ತು ಅವರೊಂದಿಗಿನ ಮಾತಿನ ಅವಕಾಶವನ್ನು ಹಂಚಿಕೊಂಡರು. ದ.ರಾ ಬೇಂದ್ರೆ ಬರಹವನ್ನೇ ಬದುಕಾಗಿಸಿಕೊಂಡವರು. ಕುವೆಂಪುರವರು ಚಿಂತನೆಗಳ ಮೂಲಕ ಮಹಾಗ್ರಂಥವನ್ನು ಸಾರಸ್ವತ ಲೋಕಕ್ಕೆ ನೀಡಿದ್ದಾರೆ. ಕವಿಗಳು ಭಾವಲೋಕದ ಭೃಂಗದಂತೆ ತನ್ನ ಕಾವ್ಯ ಲೋಕದ ಗುಂಗಿನಲ್ಲಿ ಬದುಕಿನ ಸತ್ವವನ್ನು ಈ ಜಗತ್ತಿಗೆ ನೀಡಿದ್ದಾರೆ. ಹುಯಿಲಗೋಳ ನಾರಾಯಣರಾಯರು 'ಉದಯವಾಗಲಿ ಚೆಲುವ ಕನ್ನಡ ನಾಡು' ಎಂಬ ಅರ್ಥಪೂರ್ಣ ಸಾಹಿತ್ಯವನ್ನು ನೀಡಿದ್ದಾರೆ ಎಂದು ನುಡಿದರು.

## ರೈತ ವಿರೋಧಿ ನೀತಿ ಖಂಡಿಸಿ ಫ್ರೀಡಂ ಪಾರ್ಕ್‌ನಲ್ಲಿ ಧರಣಿ



■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಬಹುಜನ ಸಮಾಜ ಪಕ್ಷ ಹಾಗೂ ಆಮ್ ಆದ್ಮಿ ಪಕ್ಷದ ಸಂಯೋಗದಲ್ಲಿ ತಾಲೂಕನ್ನು ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡಬೇಕೆಂದು ಆಗ್ರಹಿಸಿ ತಹಸೀಲ್ದಾರರಿಗೆ ಶುಕ್ರವಾರ ಮನವಿ ಪತ್ರ ಸಲ್ಲಿಸಿದರು.

ಬಹುಜನ ಸಮಾಜ ಪಕ್ಷದ ಸಂಯೋಜಕ ಬಸವರಾಜ ನವಲಗುಂದ ಮಾತನಾಡಿ, ಸರ್ಕಾರದ ಸಮೀಕ್ಷೆಯಲ್ಲಿ ಮುಂಡರಗಿ ತಾಲೂಕು ಬರಪೀಡಿತ ಪ್ರದೇಶ ಎಂದು ಗುರುತಿಸುವಲ್ಲಿ ಕೈಬಿಟ್ಟು ಹೋಗಿದೆ. ಸಚಿವರ ರೈತ ವಿರೋಧಿ ನೀತಿಯನ್ನು ಖಂಡಿಸಿ ಸೆ.25ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ಪ್ರಾರಂಭಿಸಲಾಗುವುದು ಎಂದರು.

ಹೋರಾಟವು ಸೆ.24 ರಂದು ಮಧ್ಯಾಹ್ನ 4 ಗಂಟೆಗೆ ಮುಂಡರಗಿ-ಕೊಪ್ಪಳ ಕ್ರಾಸ್‌ನಲ್ಲಿ ಸಮಾವೇಶಗೊಂಡು, ಮುಂಡರಗಿಯಿಂದ ಗದಗ-ಬೇಟಗೇರಿ ರೈಲ್ವೆ ನಿಲ್ದಾಣಕ್ಕೆ ತೆರಳಿ, ಅಲ್ಲಿಂದ ಬೆಂಗಳೂರಿನ ಫ್ರೀಡಂ ಪಾರ್ಕ್ ತಲುಪಿ, ಮುಂಡರಗಿ ತಾಲೂಕನ್ನು ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡಲು ಆಗ್ರಹಿಸಿ ಧರಣಿ ಸತ್ಯಾಗ್ರಹ ಪ್ರಾರಂಭಿಸಲಾಗುವುದು ಎಂದು ಮನವಿ ಪತದಲ್ಲಿ ತಿಳಿಸಿದರು.

ಸುಭಾಷ ಕುಂಬಾರ, ಮಂಜುನಾಥ ಹುಬ್ಬಳ್ಳಿ, ರಮೇಶ ರಾಮೇನಳ್ಳಿ, ಬಸಪ್ಪ ವಡ್ಡರ್ ಮುಂತಾದವರು ಉಪಸ್ಥಿತರಿದ್ದರು.

## ಭಾವಸಾರ ಕ್ಷತ್ರಿಯ ಸಮಾಜದಿಂದ ರಂಗೋಲಿ ಸ್ಪರ್ಧೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಗಣೇಶೋತ್ಸವದ ಅಂಗವಾಗಿ ಎಲ್ಲೆಡೆ ಸಾಂಪ್ರದಾಯಿಕ ಕಾರ್ಯಕ್ರಮಗಳು ನಡೆಯುತ್ತಿದ್ದು, ಪಟ್ಟಣದ ಭಾವಸಾರ ಕ್ಷತ್ರಿಯ ಸಮಾಜದವರು ಶುಕ್ರವಾರ ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಿದ್ದರು.

ವಿವಿಧ ವಿನ್ಯಾಸದ, ರಂಗು ರಂಗಿನ ರಂಗೋಲಿಗಳು ಸಮಾಜದ ಸಭಾ ಭವನದ ಆವರಣದಲ್ಲಿ ಕಂಗೊಳಿಸಿದವು. ಸಮಾಜದ ಮಹಿಳಾ ಸಂಘದವರು, ಯುವಕ-ಯುವತಿಯರು ವಿಶೇಷ ಆಸಕ್ತಿಯಿಂದ ಸ್ಪರ್ಧೆಗಳನ್ನು ನಡೆಸುತ್ತಿದ್ದು, ಈಗಾಗಲೇ ನೃತ್ಯ,



ಹಾಡು ಹಾಗೂ ಇತರೆ ಸ್ಪರ್ಧೆಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ನಮ್ಮ ಸಂಸ್ಕೃತಿಗಳನ್ನು ಉಳಿಸಿ ಬೆಳೆಸಲು ಇಂತಹ ಸ್ಪರ್ಧೆಗಳು ಅವಶ್ಯವಾಗಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಅನೇಕ ವೈಶಿಷ್ಟಪೂರ್ಣ ಕಾರ್ಯಕ್ರಮಗಳನ್ನು ಸಂಘಟಿಸಲು ಭಾವಸಾರ ಕ್ಷತ್ರೀಯ ಸಮಾಜದವರು ನಿರ್ಧರಿಸಿದ್ದಾರೆ.

## ಕಾರು-ಸ್ಕೂಟರ್ ಡಿಕ್ಕಿ: ಸ್ಕೂಟರ್ ಸವಾರ ಸ್ಥಳದಲ್ಲೇ ಸಾವು

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ವೇಗವಾಗಿ ಬಂದ ಕಾರು ಸ್ಕೂಟರ್ ಗೆ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಸವಾರ ಮೃತಪಟ್ಟಿರುವ ಘಟನೆ ಬೆಂಗಳೂರಿನ ಕರಿಯಾನ ಪಾಳ್ಯ ಪ್ರದೇಶದ ಬಳಿ ನಡೆದಿದೆ.

ಮೃತರನ್ನು ಅಜಯ್ ಕುಮಾರ್ ಎಂದು ಗುರುತಿಸಲಾಗಿದೆ. ಬೆಳಗ್ಗೆ 7:30ರ ಸುಮಾರಿಗೆ ಚಿಕ್ಕೇಗೌಡನ ಪಾಳ್ಯ ಕಡೆಯಿಂದ ಉತ್ತರಹಳ್ಳಿ ರಸ್ತೆ ಕಡೆಗೆ ವೇಗವಾಗಿ ಬಂದ ಕಾರು ಟೆಕ್ನಾಲಜಿ ರಸ್ತೆಯಲ್ಲಿ ಸ್ಕೂಟರ್ ಸವಾರನಿಗೆ ಡಿಕ್ಕಿ ಹೊಡೆದಿದೆ ಎಂದು ಪಶ್ಚಿಮ ಬೆಂಗಳೂರು ಉಪ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ. ಕಾರು ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿದೆ ಎಂದು ಡಿಸಿಪಿ ತಿಳಿಸಿದ್ದಾರೆ.

ಕಾರು ಚಾಲಕ ಅಜಾಗರೂಕತೆ ಮತ್ತು ನಿರ್ಲಕ್ಷ್ಯದಿಂದ ಚಾಲನೆ ಮಾಡುತ್ತಿದ್ದ. ಆದ್ದರಿಂದ ಮುಂದೆ ಬರುತ್ತಿದ್ದ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದ್ದಾನೆ ಎಂದು ಅವರು ಹೇಳಿದರು.

## ಸಂಸ್ಕೃತಿ-ಸಂಪ್ರದಾಯ ಬಿಂಬಿಸುವ ಕಾರ್ಯಕ್ರಮಗಳು ನಡೆಯಲಿ




■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಇಂದು ಪಾಶ್ಚಿಮಾತ್ಯ ಸಂಸ್ಕೃತಿಯಿಂದ ನಮ್ಮ ಸಂಸ್ಕೃತಿಯ ಮೇಲೆ ಪ್ರಹಾರ ನಡೆಯುತ್ತಿದ್ದು, ಈ ಹಿನ್ನಲೆಯಲ್ಲಿ ಜನತೆಗೆ ಮುದ ನೀಡುವ ಮತ್ತು ಸಂಸ್ಕೃತಿ-ಸಂಪ್ರದಾಯಗಳನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಗಣೇಶೋತ್ಸವ ಮಂಡಳಿಗಳಲ್ಲಿ ಹಮ್ಮಿಕೊಳ್ಳಬೇಕು ಎಂದು ಗಣ್ಯ ವರ್ತಕ ಮಹಾಬಳೇಶ್ವರಪ್ಪ ಬೇವಿನಮರದ ಹೇಳಿದರು.

ಅವರು ಬೇವಿನಮರದ ಓಣಿಯ ಶಕ್ತಿ ಮಂದಿರ ಯುವಕ ಮಂಡಳವು ಗಜಾನನೋತ್ಸವ ಅಂಗವಾಗಿ ಸಂಗೀತ ರಸಮಂಜರಿ, ಸಾಧಕರಿಗೆ ಸನ್ಮಾನ, ಭರತನಾಟ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸರಾಫ ಬಜಾರ ಸಂಘದ ಅಧ್ಯಕ್ಷ ಮಹೇಶ ಲಿಂಬಯ್ಯಸ್ವಾಮಿಮಠ ಮಾತನಾಡಿ, ಇಂತಹ ಕಾರ್ಯಕ್ರಮದಿಂದ ಪ್ರತಿಭೆಗಳನ್ನು ಗುರುತಿಸುವ ಕೆಲಸ ಆಗಬೇಕು. ಕಲಾವಿದರಿಗೆ ಪ್ರೋತ್ಸಾಹ ಕೊಡುವ ಕೆಲಸ ನಡೆಯಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ತಾಲೂಕಾ ಅರೋಗ್ಯ ನಿರೀಕ್ಷಣಾಧಿಕಾರಿ ಬಿ.ಎಸ್ ಹಿರೇಮಠ, ಮಹಮ್ಮದಸಾಬ ಡಾಲಾಯತ, ಬೆಂಗಳೂರಿನ ಭರತನಾಟ್ಯ ಶಿಕ್ಷಕಿ ಭೂಮಿಕಾ ಹೊನ್ನಳ್ಳಿ, ಬಡತನದ ಚಿನ್ನಮ್ಮ ನೂಲ್ವಿ ಅವರನ್ನು ಸನ್ಮಾನಿಸಲಾಯಿತು. ಭರತನಾಟ್ಯ ಶಿಕ್ಷಕಿ ಭೂಮಿಕಾ ಪ್ರಭಾಕರ ಹೊನ್ನಳ್ಳಿ, ಅವರ ಭರತನಾಟ್ಯ ಎಲ್ಲರ ಗಮನ ಸೆಳೆಯಿತು

ಜ್ಯೂ.ವಿಷ್ಣುವರ್ಧನ್ ಹಾಗೂ ಪಟ್ಟಣದ ವಾಸು ಮೆಲೋಡಿಸ್ ತಂಡದಿಂದ ರಸಮಂಜರಿ ಕಾರ್ಯಕ್ರಮ ನಡೆಯಿತು. ವೇದಿಕೆ ಮೇಲೆ ಪುರಸಭೆ ಸದಸ್ಯೆ ಜಯವ್ವ ಅಂದಲಗಿ, ಗಣೇಶ ಬೇವಿನಮರದ, ಗಿರೀಶ ತಟ್ಟಿ, ವೈಭವ ಗೋಗಿ, ನವೀನ ಬೆಳ್ಳಟ್ಟಿ, ಈರಣ್ಣ ಮಾಗಡಿ, ಗನಿಸಾಹೇಬ ಶಿರಹಟ್ಟಿ, ಶೈಲಾ ಆದಿ, ಶಕ್ತಿಮಂದಿರ ಯುವಕ ಮಂಡಳ ಸದಸ್ಯರು ಇದ್ದರು. ಸೌಮ್ಯ, ಚಿನ್ನಮ್ಮ ನೂಲ್ವಿ, ವಾಸು ಬೋಮಲೆ ನಿರ್ವಹಿಸಿದರು.

## ಗದುಗಿಗೆ ಆಗಮಿಸಿದ 'ಭಾರತ ಯಾತ್ರೆ'ಗೆ ಬೀಳ್ಕೊಡುಗೆ



■ ವಿಜಯಸಾಕ್ಷಿ ಸುದ್ದಿ, ಗದಗ

'ಎನ್‌ಪಿಎಸ್ ರದ್ದಾಗಲಿ, ಓಪಿಎಸ್ ಜಾರಿಯಾಗಲಿ' ಎಂಬ ಉದ್ದೇಶ ಹೊತ್ತ 'ಭಾರತ ಯಾತ್ರೆ' ರಾಜ್ಯದ ವಿವಿಧೆಡೆ ಸಂಚರಿಸುತ್ತ ಶುಕ್ರವಾರ ಗದುಗಿಗೆ ಆಗಮಿಸಿತು.

ನವದೆಹಲಿಯ ಅಖಿಲ ಭಾರತ ಶಿಕ್ಷಕರ ಫೆಡರೇಶನ್‌ನ ಕಾರ್ಯಾಧ್ಯಕ್ಷ ಬಸವರಾಜ ಗುರಿಕಾರ, ಕ.ರಾ.ಪ್ರಾ.ಶಾ.ಶಿ ಸಂಘದ ರಾಜ್ಯಾಧ್ಯಕ್ಷ ಕೆ.ನಾಗೇಶ, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ, ಅಖಿಲ ಭಾರತ ಶಿಕ್ಷಕರ ಫೆಡರೇಶನ್‌ನ ಉಪಾಧ್ಯಕ್ಷೆ ರಮಾದೇವಿ, ಕಾರ್ಯದರ್ಶಿ ಸೀಮಾ, ಖಜಾಂಚಿ ಶ್ರೀಹರಿ ಗೋವಿಂದ, ನವೀನ ಸಂಗ್ವಾ ನೇತೃತ್ವದಲ್ಲಿ ಭಾರತ ಯಾತ್ರೆ ಗದುಗಿಗೆ ಆಗಮಿಸಿತು.

ಗದಗ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ವ್ಹಿ.ಎಂ ಹಿರೇಮಠ, ಎನ್‌ಪಿಎಸ್ ನೌಕರರ ಸಂಘದ ಪದಾಧಿಕಾರಿಗಳಾದ ಎಸ್.ಸಿ ನಾಗರಳ್ಳಿ, ಮಂಜುನಾಥ ಹುಯಿಲಗೋಳ, ಪಿ.ಸಿ ಪೂಜಾರ, ನಾಗರಾಜ ಪಾಟೀಲ, ಪಿ.ಬಿ ಮುಧೋಳಮಠ, ಗಂಗಾಧರ ಗೌಡರ, ಭೋಜರಾಜ ಹಡಪದ, ಪಿ.ವೀರಪ್ಪ, ಗದಗ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಮಹೇಶ ಕುರಿಯವರ, ಸರಕಾರಿ ನೌಕರರ ಸಂಘದ ಕಾರ್ಯದರ್ಶಿ ಕೆ.ಬಿ ಕೊಣ್ಣೂರ, ಖಜಾಂಚಿ ಎ.ಕೆ ಒಂಟಿ, ಉಪಾಧ್ಯಕ್ಷ ಎಂ.ವೈ ಚಕ್ರಸಾನಿ, ಸಹಕಾರ್ಯದರ್ಶಿಗಳಾದ ಮೋಹನ ಮೆಣಸಿನಕಾಯಿ, ಮಹಾಲಕ್ಷ್ಮೀ ತೊಂಡಿಹಾಳ, ಸಂಘಟನಾ ಕಾರ್ಯದರ್ಶಿ ಬಸಮ್ಮ ಹರ್ತಿ, ಗದಗ ತಾ.ಪ್ರಾ.ಶಾ.ಶಿ.ಸಂಘದ ಅಧ್ಯಕ್ಷ ಶಿವಯೋಗಿ ಬಂಡಿ, ಶಹರ ಘಟಕದ ಅಧ್ಯಕ್ಷ ಎಸ್.ಕೆ ಮಂಗಳಗುಡ್ಡ, ರೋಣ ಘಟಕದ ಅಧ್ಯಕ್ಷ ವೈ.ಡಿ ಗಾಣಿಗೇರ, ಗಜೇಂದ್ರಗಡ ಘಟಕದ ಅಧ್ಯಕ್ಷ ವ್ಹಿ.ಎ ಹಾದಿಮನಿ, ಶಿರಹಟ್ಟಿ ಘಟಕದ ಅಧ್ಯಕ್ಷ ಎಸ್.ವ್ಹಿ ಮಠದ ಹಾಗೂ ಜಿಲ್ಲೆಯ ಎಲ್ಲ ತಾಲೂಕು ಘಟಕಗಳ ಪದಾಧಿಕಾರಿಗಳು, ಶಿಕ್ಷಕ, ಶಿಕ್ಷಕಿಯರು, ಸರಕಾರಿ ನೌಕರರು ಭಾರತ ಯಾತ್ರೆಯನ್ನು ಬರಮಾಡಿಕೊಂಡರು.

ವೇದಿಕೆ ಕಾರ್ಯಕ್ರಮದ ಬಳಿಕ ಭಾರತ ಯಾತ್ರೆಯು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮಧ್ಯಾಹ್ನ ಲಕ್ಷ್ಮೇಶ್ವರ ಮಾರ್ಗವಾಗಿ ಹಾವೇರಿಗೆ ತೆರಳಿತು.

### 'ನವನಗರ' ನಾಮಕರಣ, ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನಾ ಸಮಾರಂಭ

# ಮನಸ್ಸಿನ ಶುದ್ಧತೆ ಕಾಪಾಡಲು ಸಂಸ್ಕಾರ ಅಗತ್ಯ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮನುಷ್ಯ ನಿತ್ಯ ಜೀವನದಲ್ಲಿ ಭಗವಂತನ ಆರಾಧನೆ ಮಾಡುವುದರಿಂದ ಅವರ ಮನಸ್ಸು ಶುದ್ಧವಾಗುತ್ತದೆ. ಆ ಮೂಲಕ ಮನಃಶಾಂತಿ ಲಭಿಸುವುದಲ್ಲದೇ, ಅವರ ಸಂಸ್ಕಾರ ಜಾಗೃತವಾಗುತ್ತದೆ ಎಂದು ಹಂಪಸಾಗರ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ಕೋಳಿಫಾರ್ಮ್ ಬಡಾವಣೆಗೆ ನವನಗರ ಎಂಬ ನೂತನ ನಾಮಕರಣ ಮತ್ತು ನವನಗರ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನಾ ಸಮಾರಂಭದಲ್ಲಿ ಅವರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಮನುಷ್ಯನ ಜೀವನ ಬಳಹ ಮುಖ್ಯವಾದುದು. 84 ಲಕ್ಷ ಜೀವರಾಶಿಯಲ್ಲಿ ಮನುಷ್ಯ ಜನ್ಮ ಶ್ರೇಷ್ಠತೆ ಹೊಂದಿದೆ. ಪ್ರತಿಯೊಬ್ಬರ ಜೀವನ ಶೈಲಿ ಕೂಡ ವಿಭಿನ್ನವಾಗಿರುತ್ತದೆ.

ಜೀವನ ಶೈಲಿ ಮನುಷ್ಯನ ಆಚಾರ, ವಿಚಾರ, ನಡವಳಿಕೆ, ಸಂಸ್ಕಾರವನ್ನು ತಿಳಿಸುತ್ತದೆ. ಸಂಸ್ಕಾರದಿಂದ ನಮ್ಮಲ್ಲಿರುವ ಅಜ್ಞಾನವನ್ನು ದೂರ ಮಾಡಿ, ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿ ಪಡೆಯಲು ಸಾಧ್ಯವಾಗುತ್ತದೆ.

ಈ ನೂತನ ನವನಗರದಲ್ಲಿ ವಾಸ ಮಾಡುವ ನಿವಾಸಿಗಳು ಇಂತಹ ಸಂಸ್ಕಾರದ ಜೀವನ ಬದುಕಬೇಕು. ಹಬ್ಬ-ಹರಿದಿನಗಳನ್ನು ಎಲ್ಲರೂ ಒಂದಾಗಿ ಪ್ರೀತಿ, ಸ್ನೇಹದಿಂದ ಆಚರಿಸಬೇಕು. ಈ ಬಡಾವಣೆಗೆ ನವನಗರ ಎಂದು ನಾಮಕರಣ ಮಾಡಿ ಇಂದಿನಿಂದ ಎಲ್ಲ ನಿವಾಸಿಗಳು ಸಮರಸದ ಬಾಳನ್ನು ನಡೆಸಬೇಕು ಎಂದರು. ಡಾ. ಎಸ್.ಜಿ ಗುರಿಕಾರ, ನಿವೃತ್ತ ಮುಖ್ಯಶಿಕ್ಷಕ ಅರುಣ ಬಿ.ಕುಲಕರ್ಣಿ, ನವನಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಡಾ. ಎನ್.ಬಿ ಕುರಿ, ಪ್ರಭುಲಿಂಗಗೌಡ ನಾಡಗೌಡ, ಶಿವಪುತ್ರಪ್ಪ ಸಂಗನಾಳ, ನಜೀರಸಾಬ ಇಟಗಿ, ಮೈಲಾರಪ್ಪ ಗೋಡಿ, ಎಂ.ಎಸ್ ಮಲ್ಲನಗೌಡ್ರ, ಶಹನಾಜ್ ಸಿದ್ದೀಕ, ಜಿ.ಎಂ ನದಾಫ್, ಜಯಶ್ರೀ ಭಜಂತ್ರಿ, ರಜಿಯಾಬೇಗಂ ಹೊಸಮನಿ, ರಾಮಕ್ಕ ಮಾನವಿ, ಗವಿಸಿದ್ದಪ್ಪ ಗೊಡಚಪ್ಪನವರ, ವಿ.ಬಿ ಹುರಕಡ್ಲಿ, ಡಿ.ಬಿ ಹಕ್ಕಿ, ಆರ್.ಟಿ ಯಲಬುರ್ಗಿ ಸೇರಿದಂತೆ ನವನಗರ ಯಂಗ್‌ಸ್ಟರ್ ತಂಡದವರು ಇದ್ದರು.

ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ನಿಡಗುಂದುಕೊಪ್ಪ ಶಾಖಾ ಶಿವಯೋಗ ಮಂದಿರದ ಅಭಿನವ ಚನ್ನಬಸವ ಸ್ವಾಮೀಜಿಗಳು, ದರಗಾದ ಶ್ರೀ ಮಂಜೂರ ಹುಸೇನ್ ಶ್ಯಾವಲಿಯವರು ದಿವ್ಯ ಸಾನ್ನಿಧ್ಯ ವಹಿಸಿದ್ದರು.

**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com

ಮೊ : 9019256545

# ವಿಕಲಚೇತನ ಯುವಕನ ಯಾತ್ರೆಗೆ ಶುಭ ಕೋರಿದ ಸಾರ್ವಜನಿಕರು



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮುಸ್ಲಿಂರ ಪವಿತ್ರ ಯಾತ್ರಾ ಸ್ಥಳಗಳಲ್ಲಿ ಒಂದಾಗಿರುವ ಉಮ್ರಾಹಜ್‌ಗೆ ಲಕ್ಷ್ಮೇಶ್ವರದ ವಿಕಲಚೇತನ ಯುವಕ ನೂರಹ್ಮದ ಇಳಕಲ್ ಯಾತ್ರೆ ಕೈಗೊಂಡಿದ್ದು, ಪಟ್ಟಣದ ಹಿಂದೂ-ಮುಸ್ಲಿಂ ಬಾಂಧವರು ಅವನ ಯಾತ್ರೆಗೆ ಶುಭಕೋರಿ ಬೀಳ್ಕೊಟ್ಟರು.

ಪಟ್ಟಣದ ಮಲ್ಲಿಕ್ ಚಾ ದರ್ಗಾದಲ್ಲಿ ಸೇವೆ ಮಾಡಿಕೊಂಡಿದ್ದ ನೂರಅಹ್ಮದ್ ಅನೇಕ ವರ್ಷಗಳಿಂದ ಈ ಕ್ಷೇತ್ರಕ್ಕೆ ತೆರಳುವ ಇಚ್ಛೆಯಿಂದ ಹಣ ಕೂಡಿಟ್ಟುಕೊಂಡಿದ್ದು ವಿಶೇಷವಾಗಿದೆ. ಯಾತ್ರೆಗಾಗಿ ಸಮಾಜದವರು ಮತ್ತು ಇತರರು ಸಹಾಯಹಸ್ತ ಚಾಚಿರುವುದರಿಂದ ಈತನ ಯಾತ್ರೆಯ ಕನಸು ನನಸಾಗುವಂತಾಗಿದೆ.

ಈ ಸಂದರ್ಭದಲ್ಲಿ ಅಬ್ದುಲ್ ರಿತ್ತಿ, ಯು ಪದ್ಮನಾಭಶೆಟ್ಟಿ, ಪದ್ಮರಾಜ ಪಾಟೀಲ, ಸಿರಾಜ್ ಡಾಲಾಯತ್, ಪರಮೇಶ ಲಮಾಣಿ, ಚನ್ನಪ್ಪ ಬಳಗಾನೂರ, ಮಲ್ಲೇಶ ಬಸಾಪೂರ, ಮಂಜುನಾಥ ಶರಸೂರಿ ಸೇರಿದಂತೆ ನೂರಾರು ಜನರು ಯಾತ್ರೆಗೆ ಶುಭ ಹಾರೈಸಿದರು.

# ವ್ಯಾಪಾರಸ್ಥರ ಸಂಘದಿಂದ ವಿವಿಧ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ತರುಣ ವ್ಯಾಪಾರಸ್ಥರ ಸಂಘವು 47ನೇ ವರ್ಷದ ಶ್ರೀ ಗಜಾನನೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿದೆ.

ಸೆ. 24ರಂದು ಮುಂಜಾನೆ 10.30 ಗಂಟೆಗೆ ರಕ್ತದಾನ ಶಿಬಿರ, ಸೆ.26ರಂದು ಮುಂಜಾನೆ 10 ಗಂಟೆಗೆ ಮಹಾಪೂಜೆ, ಸಂಜೆ 7ಗಂಟೆಗೆ ಲಿಲಾವು (ಹರಾಜು), ಸೆ. 27ರಂದು ಮಧ್ಯಾಹ್ನ 3 ಗಂಟೆಗೆ ಗಣಪತಿ ವಿಸರ್ಜನೆ ಕಾರ್ಯಕ್ರಮ ಏರ್ಪಡಿಸಿದೆ. ತರುಣ ವ್ಯಾಪಾರಸ್ಥರ ಸಂಘದ ಪದಾಧಿಕಾರಿಗಳು, ಸಕಲ ಭಕ್ತಾದಿಗಳು ಈ ಎಲ್ಲ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಸಂಘದ ಪ್ರಕಟಣೆ ತಿಳಿಸಿದೆ.

# ಮುಂದೊಂದು ದಿನ ಸತ್ಯ ಹೊರಬರುತ್ತದೆ

▶▶ಮೊದಲನೇ ಪುಟದಿಂದ

ರಾಜ್ಯದಲ್ಲಿ ಅಲ್ಪಸಂಖ್ಯಾತರನ್ನು ಓಲೈಸುವ ಭರದಲ್ಲಿ ಮುಖ್ಯಮಂತ್ರಿಗಳು ಹಿಂದೂ ಸಂಘಟನೆಗಳ ಮುಖಂಡರನ್ನು ಒಂದಿಲ್ಲೊಂದು ಸುಳ್ಳು ಪ್ರಕರಣದಲ್ಲಿ ಸಿಲುಕಿಸಿ, ಪ್ರಕರಣ ದಾಖಲಿಸುವ ಪ್ರಯತ್ನಗಳು ನಡೆದಿವೆ. ಇದು ಬಹಳ ದಿನ ನಡೆಯುವದಿಲ್ಲ. ಸತ್ಯ ಒಂದಿಲ್ಲೊಂದು ದಿನ ಹೊರಗೆ ಬಂದೇ ಬರುತ್ತದೆ. ಸರಕಾರ ಹಿಂದೂ ಸಂಘಟನೆಗಳ ಮುಖಂಡರು, ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣ ದಾಖಲಿಸುವ ಪ್ರಯತ್ನಗಳನ್ನು ಕೂಡಲೇ ಕೈಬಿಡುವಂತೆ ಆಗ್ರಹಿಸಿದರು. ಈ ಸಂದರ್ಭದಲ್ಲಿ ಮಹೇಶ್ ರೋಖಡೆ, ಬಸವರಾಜ್ ಬನ್ನಿಮರದ, ಅಶೋಕ ಭಜಂತ್ರಿ, ಈಶ್ವರ ಕಾಟವಾ, ಕಾರ್ತಿಕ್ ಭಜಂತ್ರಿ, ಮಹಾಬಲೇಶ್ವರ ಶೆಟ್ಟರ, ರಮೇಶ್ ಹಲಗಿ, ಕಿರಣ್ ಹಿರೇಮಠ, ಶಶಿಧರ್ ಗಟ್ಟಿ, ಹುಲಿಗೆಪ್ಪ ವಾಲ್ಮೀಕಿ, ಬಸವರಾಜ ಕುರ್ತಕೋಟಿ, ಸತೀಶ ಕುಂಬಾರ, ಸಂಜು ಚಟ್ಟಿ, ಮಹಾಂತೇಶ ಪಾಟೀಲ, ವಿರೇಶ ಮಾನ್ವಿ, ಈರಣ್ಣ ವಾಲ್ಮೀಕಿ, ಗುರುಚಾರ ಮರಾಠಿ, ಶಿವಕುಮಾರ ಕೊರ್ಲಹಳ್ಳಿ, ವಿನಾಯಕ್ ಉರುಗಲ್, ಮಂಜು ಹೆಗಡೆ, ಪ್ರವೀಣ ಕೊಳ್ಳಿ, ಮಂಜುನಾಥ ಬೇಲೇರಿ, ಬಸವರಾಜ ಬನ್ನಿಮರದ ಮುಂತಾದವರಿದ್ದರು.

# ಹಳೆಯ ವಿದ್ಯಾರ್ಥಿಗಳ ಪೂರ್ವಭಾವಿ ಸಭೆ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಶ್ರೀ ಸಿ.ಎಸ್ ಪಾಟೀಲ(ಮಾಡೆಲ್) ತ್ರಿವಳಿ ಶಾಲೆಗಳ ಅಮೃತಮಹೋತ್ಸವವನ್ನು ನವೆಂಬರ್ 23ರಂದು ಆಚರಿಸುತ್ತಿದ್ದು, ಇದರ ಪ್ರಯುಕ್ತ ಸೆ.24ರಂದು ಹಳೆಯ ವಿದ್ಯಾರ್ಥಿಗಳ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ.

ಶಾಲೆಯಲ್ಲಿ ಕಲಿತುಹೋದ ಹಳೆಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೆ.24ರ ಬೆಳಿಗ್ಗೆ 11 ಗಂಟೆಗೆ ಶ್ರೀ ಸಿ.ಎಸ್ ಪಾಟೀಲ ಬಾಲಕರ ಪ್ರೌಢಶಾಲೆಯಲ್ಲಿ ಹಾಜರಿರಲು ಶಾಲಾ ಆಡಳಿತ ಮಂಡಳಿ ಹಾಗೂ ಶಾಲಾ ಸಿಬ್ಬಂದಿಗಳು ಕೋರಿದ್ದಾರೆ.



ಲಕ್ಷ್ಮೇಶ್ವರದ ವಿವಿಧೆಡೆಗಳಲ್ಲಿ ಸೆ.18ರಂದು ಸ್ಥಾಪಿಸಿದ್ದ ಗಣೇಶನ ಮೂರ್ತಿಗಳನ್ನು ಶುಕ್ರವಾರ ವಿಸರ್ಜಿಸಲಾಯಿತು. ಪಟ್ಟಣದ ಕೋರ್ಟ್ ಆವರಣದಲ್ಲಿ ವಕೀಲರ ಸಂಘದ ವತಿಯಿಂದ ಸ್ಥಾಪಿಸಲಾಗಿದ್ದ ಗಣೇಶನನ್ನು ಸಂಜೆ ವೇಳೆಗೆ ಮೆರವಣಿಗೆ ಮೂಲಕ ಸಾಗಿ, ಪಂಪ ವೃತ್ತದ ಬಳಿ ನಿರ್ಮಿಸಲಾಗಿರುವ ತಾತ್ಕಾಲಿಕ ಹೊಂಡಗಳಲ್ಲಿ ವಿಸರ್ಜಿಸಿದರು.

ಲಕ್ಷ್ಮೇಶ್ವರ ತಾಲೂಕು ಮಟ್ಟದ ಥ್ರೋಬಾಲ್ ಪಂದ್ಯದ ಬಾಲಕ ಮತ್ತು ಬಾಲಕಿಯರ ಸ್ಪರ್ಧೆಯಲ್ಲಿ ಬಟ್ಟೂರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ತರಬೇತುದಾರರಾದ ಎಮ್. ಎಸ್ ಕಾಳೆ ಇವರಿಗೆ ಪ್ರಧಾನ ಗುರುಗಳು ಹಾಗೂ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.



### ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ನಾಳೆ ಗೌರವಾರ್ಪಣೆ

# 'ಶಿವಯೋಗಿ ಶ್ರೀ ಪುಟ್ಟರಾಜ' ಪ್ರಶಸ್ತಿ ಪುರಸ್ಕೃತರು

■ವಿಜಯಸಾಕ್ಷಿ ಸುದ್ದಿ, ಗದಗ

ಗಾನಯೋಗಿ ಡಾ. ಪಂ.ಪುಟ್ಟರಾಜ ಸೇವಾ ಸಮಿತಿ ವತಿಯಿಂದ ಪದ್ಮಭೂಷಣ ಡಾ. ಪಂ.ಪುಟ್ಟರಾಜ ಕವಿ ಗವಾಯಿಗಳವರ 13ನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮ ಸೆ.25ರಂದು ಸಂಜೆ 6.30 ಗಂಟೆಗೆ ನಗರದ ವೀರೇಶ್ವರ ಪುಣ್ಯಾಶ್ರಮದಲ್ಲಿ ಜರುಗಲಿದ್ದು, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ 'ಶಿವಯೋಗಿ ಶ್ರೀ ಪುಟ್ಟರಾಜ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುತ್ತಿದೆ.

**ಡಿ. ಕುಮಾರದಾಸ ಗವಾಯಿಗಳು (ಸಂಗೀತ ಕ್ಷೇತ್ರ):** ಶ್ರೀಯುತರು ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಚಿರಪರಿಚಿತರು. ಬಳ್ಳಾರಿ ಜಿಲ್ಲೆಯ ಏಳಬೆಂಚಿ ಎಂಬ ಪುಟ್ಟ ಗ್ರಾಮದಲ್ಲಿ ಜನಿಸಿದ ಇವರು, ಹುಟ್ಟಿನಿಂದಲೇ ಬಡತನವನ್ನು ಬೆನ್ನಿಗಂಟಿಸಿಕೊಂಡು ಬಂದವರು. ಆ ಗ್ರಾಮದ ಜನ ಇಂತಹ ಬಾಲ ಪ್ರತಿಭೆಯನ್ನು ಗುರುತಿಸಿ ಅವರಿಗೆ ಆರ್ಥಿಕ ಸಹಾಯವನ್ನಿತ್ತು, ಗದುಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ಸಂಗೀತ ವಿದ್ಯಾರ್ಜನೆಗಾಗಿ ಕಳಿಸಿಕೊಟ್ಟರು.

ಬಾಲಕ ಕುಮಾರದಾಸ ಪುಣ್ಯಾಶ್ರಮದ ಅಧ್ಯಕ್ಷರಾಗಿದ್ದ ಖ್ಯಾತ ಸಂಗೀತ ವಿದ್ವಾಂಸರಾದ ಡಾ. ಪುಟ್ಟರಾಜ ಗವಾಯಿಗಳವರ ಆಶ್ರಯದಲ್ಲಿದ್ದುಕೊಂಡು, ಅವರಿಂದ ಸಂಗೀತ ವಿದ್ಯೆಯನ್ನು ಸಂಪಾದಿಸಿದರು. 12 ವರ್ಷದವರೆಗೆ ಗುರು ಸನ್ನಿಧಿಯಲ್ಲಿ ಸಂಗೀತ ವಿದ್ಯೆಯನ್ನು ಕರಗತ ಮಾಡಿಕೊಂಡು, ಡಾ. ಪುಟ್ಟರಾಜ ಗವಾಯಿಗಳವರಿಂದ ಬಂಗಾರದ ಪದಕ, ಅನುಗ್ರಹ ಪಡೆದರು. ಕರ್ನಾಟಕ ಸರಕಾರದ 'ವಿದ್ವತ್' ಮತ್ತು ಗಂಧರ್ವ ಮಹಾವಿದ್ಯಾಲಯದ 'ವಿಶಾರದ' ಪರೀಕ್ಷೆಯನ್ನು ಉನ್ನತ ಶ್ರೇಣಿಯೊಂದಿಗೆ ತೇರ್ಗಡೆ ಹೊಂದಿದ್ದಾರೆ. ಇವರು ಆಕಾಶವಾಣಿಯ ಎ ಗ್ರೇಡ್ ಕಲಾವಿದರಾಗಿದ್ದಾರೆ.

**ರಾಜಣ್ಣ ಜೇವರ್ಗಿ (ಕಲಾಕ್ಷೇತ್ರ):** ಜೇವರ್ಗಿ ರಾಜಣ್ಣ ಅವರು ಕಲಬುರಗಿ ಜಿಲ್ಲೆಯ ಜೇವರ್ಗಿ ಗ್ರಾಮದವರು. ಇವರು ತಮ್ಮ 21ನೇ ವಯಸ್ಸಿನಲ್ಲಿ ಬೆನಕಟ್ಟಿಯ ಬಸವೇಶ್ವರ ನಾಟ್ಯ ಸಂಘದಲ್ಲಿ ನಟರಾಗಿ ರಂಗಭೂಮಿಗೆ ಪ್ರವೇಶ ಮಾಡಿದರು.






ಹಾನಗಲ್ಲ ಕುಮಾರೇಶ್ವರ ನಾಟ್ಯ ಸಂಘದಲ್ಲಿ, ಯಾಳವಾರ ಬಸಣ್ಣ ಅವರ ನಾಟಕ ಕಂಪನಿಯಲ್ಲಿ ನಟರಾಗಿ, ಜೇವರ್ಗಿಯ ಸ್ವಯಂಜ್ಯೋತಿ ನಾಟ್ಯ ಸಂಘದಲ್ಲಿ ಹಾಸ್ಯ ಪಾತ್ರಧಾರಿಯಾಗಿ ನಟಿಸಿದ್ದಾರೆ. ನಂತರ 1989ರಲ್ಲಿ ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘ ಜೇವರ್ಗಿ ಎಂಬ ನಾಟಕ ಕಂಪನಿಯನ್ನು ಕಟ್ಟಿ ಕಳೆದ 35 ವರ್ಷಗಳಿಂದ ನಿರಂತರವಾಗಿ ನಾಟಕಗಳ ಪ್ರಯೋಗ ಮಾಡುತ್ತಾ ಬಂದಿದ್ದಾರೆ.

ಇವರಿಗೆ ಕರ್ನಾಟಕ ನಾಟಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ (2007), ಧಾರವಾಡ ವಿದ್ಯಾವರ್ಧಕ ಸಂಘ ಸೇರಿದಂತೆ ರಾಜ್ಯದಾದ್ಯಂತ ವಿವಿಧ ಸಂಘ-ಸಂಸ್ಥೆಗಳಿಂದ ಸನ್ಮಾನ ಪ್ರಶಸ್ತಿಗಳು ದೊರಕಿವೆ. ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘ, ಜೇವರ್ಗಿ ನಾಟಕ ಕಂಪನಿಯಡಿಯಲ್ಲಿ ರಾಜ್ಯದಾದ್ಯಂತ 15 ಸಾವಿರಕ್ಕೂ ಅಧಿಕ ಪ್ರಯೋಗ ಕಂಡು, ದಾಖಲೆ ನಿರ್ಮಿಸಿದ ಏಕೈಕ ನಾಟಕ ವೃತ್ತಿ ಕಂಪನಿ ಆಗಿದೆ.

ದ್ವಂದ್ವ ಸಂಭಾಷಣೆ ಇಲ್ಲದ, ಐಟಂ ಸಾಂಗ್ ಇಲ್ಲದ ಕುಟುಂಬ ಸಮೇತ ನೋಡುವ ನಾಟಕ ಪ್ರದರ್ಶನ ನೀಡುತ್ತ, ಸುಪ್ರಸಿದ್ಧ 'ಕುಂಟ ಕೋಣ, ಮೂಕ ಜಾಣ' ಈ ನಾಟಕವನ್ನು ಯೂಟ್ಯೂಬ್‌ನಲ್ಲಿ 1.35 ಕೋಟಿ ಪ್ರೇಕ್ಷಕರು ವೀಕ್ಷಿಸಿದ್ದಾರೆ.

**ಪಂ. ಶಿವಮೂರ್ತಯ್ಯ ಶಾಸ್ತ್ರಿಗಳು(ಪ್ರವಚನ ಕ್ಷೇತ್ರ):** ಇವರು ಹಾವೇರಿ ಜಿಲ್ಲೆ ಶಿಗ್ಗಾಂವ್ ತಾಲೂಕ ಹಿರೇಮಲ್ಲೂರು ಗ್ರಾಮದ ಹಿರೇಮಠದವರು.

ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಪೂರೈಸಿ ನಂತರ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರ ಶಿಷ್ಯರಾಗಿ ಗದಗ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ 12 ವರ್ಷಗಳ ಕಾಲ ಸಂಗೀತ, ಸಾಹಿತ್ಯ, ಕಥಾಕೀರ್ತನ, ಪುರಾಣ ಪ್ರವಚನ ಸಂಸ್ಕೃತ, ವೈದಿಕ, ಶಾಸ್ತ್ರಗಳ ಅಧ್ಯಯನ ಮಾಡಿ ಪಂಡಿತೋತ್ತಮರಾದರು. ಎಲ್ಲಾ ರಂಗಗಳಲ್ಲಿ ಉತ್ತಮ ಸೇವೆ ನೀಡಿ ನಾಡಿನಾದ್ಯಾಂತ ಚಿರಪರಿಚಿತರಾಗಿ ಮಠ-ಮಂದಿರ, ಸಂಘ-ಸಂಸ್ಥೆಗಳಿಂದ ಪುರಾಣ ಪ್ರವಚನ ಪ್ರಭಾಕರ, ಪುರಾಣ ಪ್ರವಚನ ಕಂಠೀರವ ಧರ್ಮಪ್ರಚಾರ ರತ್ನ, ಅನೇಕ ಪ್ರಶಸ್ತಿ ಪುರಸ್ಕಾರ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಗದಗ ಶ್ರೀ ವೀರೇಶ್ವರ ಪುಣ್ಯಾಶ್ರಮದಿಂದ 'ಹಾನಗಲ್ ಕುಮಾರಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪಡೆದು ಶ್ರೇಷ್ಠ ವಿದ್ವನ್ಮಣಿಗಳ ಸಾಲಿನಲ್ಲಿ ನಿಂತ ರಾಜ್ಯದ ಶ್ರೇಷ್ಠ ಕಲಾವಿದರಾಗಿದ್ದಾರೆ.

**ನಿಂಗಪ್ಪ ಬುಳ್ಳಪ್ಪ ನರ್ಚಿ (ಸಮಾಜಸೇವಾ ಕ್ಷೇತ್ರ):** ಇವರು ಧಾರವಾಡ ಜಿಲ್ಲೆಯ ಕಲ್ಲೂರು ಗ್ರಾಮದವರಾಗಿದ್ದು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ಜೋಯ್ಡಿತಾಲ್ಲೂಕಿನ ಗಣೇಶಗುಡಿಯಲ್ಲಿ ಕ್ವಾಲಿಟಿ ಕಂಟ್ರೋಲರ್ ವಿಭಾಗದಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿದ್ದಾರೆ. ಅಪಾರ ಧಾರ್ಮಿಕ ಶ್ರದ್ಧೆ ಹೊಂದಿದ ಇವರು ಸಮಾಜಸೇವೆ ಮಾಡುತ್ತ ಪಂ. ಪುಟ್ಟರಾಜ ಗವಾಯಿಗಳ ಆಶೀರ್ವಾದದಂತೆ ಬಡವರಿಗೆ, ನೊಂದವರಿಗೆ ತಮ್ಮ ಕೈಲಾದಷ್ಟು ಸಹಾಯ ಸಹಕಾರ ನೀಡುತ್ತ ಬಂದಿದ್ದಾರೆ.

# ಮಹಿಳಾ ಮೀಸಲಾತಿ ಸ್ವಾಗತಾರ್ಹ: ಸ್ವಾತಿ ಅಕ್ಕಿ

■ವಿಜಯಸಾಕ್ಷಿ ಸುದ್ದಿ, ಗದಗ



ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನೂತನ ಸಂಸತ್ ಭವನದಲ್ಲಿ 'ನಾರಿ ಶಕ್ತಿ ವಂದನ ಅಧಿನಿಯಮ' ಹೆಸರಿನಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಸ್ಥಾನವನ್ನು ಮೀಸಲಿಡುವ ಸಾಂವಿಧಾನಿಕ ತಿದ್ದುಪಡಿ ಮಸೂದೆಯನ್ನು ಮಂಡಿಸಿ, ಸುದೀರ್ಘ ಚರ್ಚೆ ಬಳಿಕ ಮಸೂದೆ ಪರವಾಗಿ 454 ಮತಗಳನ್ನು ಪಡೆಯುವ ಮೂಲಕ ಮಸೂದೆ ಅಂಗೀಕರಿಸಿರುವುದು ಸ್ವಾಗತಾರ್ಹವಾಗಿದೆ ಎಂದು ಗದಗ ಶಹರ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸ್ವಾತಿ ಅಕ್ಕಿ ಹೇಳಿದ್ದಾರೆ.

ಈಗಾಗಲೇ ಎಲ್ಲ ವಲಯಗಳಲ್ಲಿ ಮಹಿಳೆಯರು ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಈ ಅಧಿನಿಯಮದ ಮೂಲಕ ನಮ್ಮ ಪ್ರಜಾಪ್ರಭುತ್ವ ಇನ್ನಷ್ಟು ಬಲಗೊಳ್ಳಲಿದ್ದು, ಭಾರತೀಯ ಜನತಾ ಪಕ್ಷ ಮಹಿಳೆಯರ ಬಗ್ಗೆ ವಿಶೇಷ ಕಾಳಜಿ ವಹಿಸುತ್ತದೆ ಎನ್ನುವುದಕ್ಕೆ ಇದೊಂದು ಸ್ಪಷ್ಟ ನಿದರ್ಶನವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

### ಅ.1ರಂದು ಸಾಮೂಹಿಕ ಕ್ಷಮಾವಳಿ, ಸಮಾರೋಪ ಸಮಾರಂಭ

# ಜಿಲ್ಲಾ ದಿಗಂಬರ ಜೈನ ಸಂಘದಿಂದ ದಶಲಕ್ಷಣ ಪರ್ವಾಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ದಿಗಂಬರ ಜೈನ ಸಂಘವು ದಶಲಕ್ಷಣ ಪರ್ವಾಚರಣೆ ಮತ್ತು ಸಮಾಜ ಸಂಪರ್ಕ ಸಭೆ ಕಾರ್ಯಕ್ರಮಗಳನ್ನು ಸೆ. 20ರಿಂದ ಪ್ರಾರಂಭಿಸಿದ್ದು, ಅಕ್ಟೋಬರ್ 1ರವರೆಗೆ ಗದಗ ಜಿಲ್ಲೆಯ ವಿವಿದೆಡೆ ಏರ್ಪಡಿಸಿದೆ.

ಸೆ. 26ರಂದು ಸಂಜೆ 4 ಗಂಟೆಗೆ ಹುಯಿಲಗೋಳದ ಪಾರ್ಶ್ವನಾಥ ಜಿನಮಂದಿರದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಮೇಶ ಬೆಳಗಟ್ಟಿ ವಹಿಸುವರು. ಮಧುಮತಿ ಕಬ್ಬಿಣ ಉಪನ್ಯಾಸ ನೀಡುವರು. ಸೆ. 27ರಂದು ಮಧ್ಯಾಹ್ನ 1 ಗಂಟೆಗೆ ಅಂತೂರ-ಬೆಂತೂರಿನ ಪಾರ್ಶ್ವನಾಥ ಜಿನಮಂದಿರದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿ.ಎಸ್ ನಾವಳ್ಳಿ ವಹಿಸುವರು. ಉಮಾ ಹಾವೇರಿ ಉಪನ್ಯಾಸ ನೀಡುವರು. ಸೆ. 28ರಂದು ಸಂಜೆ 5 ಗಂಟೆಗೆ ಮುಳಗುಂದದ ದೇಶಪಾಂಡೆ ವಾಡೆಯಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಾಗರಾಜ ದೇಶಪಾಂಡೆ ವಹಿಸುವರು. ಸಿಪಿಐ ಅಶೋಕ ಸದಲಗಿ ಉಪಸ್ಥಿತರಿರುವರು. ಶ್ರೀನಿವಾಸ ಬೆಟದೂರ ಉಪನ್ಯಾಸ ನೀಡುವರು.

ಸೆ. 29ರಂದು ಸಂಜೆ 4 ಗಂಟೆಗೆ ಗದಗ ಹುಡ್ಕೋ ಕಾಲೋನಿಯ ಪ್ರಕಾಶ ಮುತ್ತಿನ ಅವರ ಕಟ್ಟಡದಲ್ಲಿರುವ ಗದಗ ಜಿಲ್ಲಾ ದಿಗಂಬರ ಜೈನ ಸಂಘದ ಕಾರ್ಯಾಲಯದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಅಪ್ಪಣ್ಣ ಹಂಜೆ ವಹಿಸುವರು. ಲಕ್ಷ್ಮಣ ಅಂಬೋಜಿ ಉಪನ್ಯಾಸ ನೀಡುವರು. ಅಕ್ಟೋಬರ್ 1ರಂದು ಮುಂಜಾನೆ 10.30ಕ್ಕೆ ಗದುಗಿನ ವ್ಹಿಡಿಎಸ್‌ಟಿಸಿ ಬಾಲಕರ ಪ್ರೌಢಶಾಲೆಯ ಸಭಾಂಗಣದಲ್ಲಿ ಸಾಮೂಹಿಕ ಕ್ಷಮಾವಳಿ ಹಾಗೂ ಸಮಾರೋಪ ಸಮಾರಂಭ ನಡೆಯಲಿದೆ.

ಸಚಿವ ಎಚ್.ಕೆ ಪಾಟೀಲ ಉದ್ಘಾಟಿಸುವರು, ಎಂ.ಸಿ ಕಟ್ಟಿಮನಿ ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಡಿ.ಆರ್ ಪಾಟೀಲ, ವಿದ್ಯಾದಾನ ಸಮಿತಿಯ ಅಧ್ಯಕ್ಷ ಡಿ.ಬಿ ಹುಯಿಲಗೋಳ, ಕಾರ್ಯದರ್ಶಿ ಶ್ರೀನಿವಾಸ ಹುಯಿಲಗೋಳ, ಅಲ್ಪಸಂಖ್ಯಾತರ ಇಲಾಖೆಯ ಅಧಿಕಾರಿ ಅಮಿತ ಬಿದರಿ, ಗಣ್ಯರಾದ ನಾಗರಾಜ ದೇಶಪಾಂಡೆ, ಸಂಜಯ ಬಾಗಮಾರ, ರಮೇಶ ಬೆಳಗಟ್ಟಿ ಆಗಮಿಸುವರು. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಪಿ.ಎ ಕುಲಕರ್ಣಿ ವಹಿಸುವರು.

ಸಮಾಜಬಾಂಧವರು ಈ ಎಲ್ಲ ಕಾರ್ಯಕ್ರಮಗಳಲ್ಲಿ ಸಕಾಲಕ್ಕೆ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಸಂಘದ ಕಾರ್ಯದರ್ಶಿ ಪ್ರಕಾಶ ಮುತ್ತಿನ ವಿನಂತಿಸಿದ್ದಾರೆ.

# ಪ್ರತಿಯೊಬ್ಬರಿಗೂ ಆರೋಗ್ಯಭಾಗ್ಯ ಲಭ್ಯವಾಗಲಿ



■ವಿಜಯಸಾಕ್ಷಿ ಸುದ್ದಿ,ಲಕ್ಷ್ಮೇಶ್ವರ

ಎಲ್ಲರಿಗೂ ಉತ್ತಮ ಆರೋಗ್ಯ ಅವಶ್ಯ. ಆದರೆ, ಈ ಬಗ್ಗೆ ಯಾರೂ ಸರಿಯಾದ ಚಿಂತನೆ ನಡೆಸದಿರುವದರಿಂದ ಅನೇಕ ಆರೋಗ್ಯ ಸಮಸ್ಯೆಗಳು ಕಾಡುತ್ತವೆ. ಈ ಹಿನ್ನೆಲೆಯಲ್ಲಿ ಈಶ್ವರೀಯ ವಿಶ್ವವಿದ್ಯಾಲಯದಿಂದ ಸೆ.25ರಿಂದ ಅ.4ರವರೆಗೆ 10 ದಿನಗಳ ಕಾಲ ಉಚಿತ 'ಆರೋಗ್ಯ ಲೋಕ' ಎನ್ನುವ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಆರೋಗ್ಯ ಪ್ರತಿಯೊಬ್ಬರಿಗೂ ದೊರಕುವಂತಾಗಲಿ ಎನ್ನುವದು ಈಶ್ವರೀಯ ವಿಶ್ವವಿದ್ಯಾಲಯ ಉದ್ದೇಶವಾಗಿದೆ ಎಂದು ಸಂಚಾಲಕಿ ಬಿ.ಕೆ ನಾಗಲಾಂಬಿಕೆ ಹೇಳಿದರು.

ಅವರು ಕಾರ್ಯಕ್ರಮ ಕುರಿತು ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಪ್ರಥಮ ಬಾರಿಗೆ ಇಂತಹ ಉಪಯುಕ್ತ ಕಾರ್ಯಕ್ರಮ ಮಾಡುತ್ತಿದ್ದು, ಇದರಲ್ಲಿ ಪ್ರತಿದಿನ ಸುಮಾರು 11 ತಜ್ಞ ವೈದ್ಯರಿಂದ ಮಾಹಿತಿ-ಸಲಹೆ, ಹಲವಾರು ಕಾಯಿಲೆಗಳಿಗೆ ಸೂಕ್ತ ಪರಿಹಾರ ಮತ್ತು ಮಾರ್ಗದರ್ಶನ ಮಾಡಿಕೊಡುವದು ಈ ಶಿಬಿರದ ಉದ್ದೇಶವಾಗಿದೆ. ಅ.5ರಂದು ಸಮಾರೋಪ ಸಮಾರಂಭವಿದ್ದು, ಹುಬ್ಬಳ್ಳಿ ವರದಶ್ರೀ ಫೌಂಡೇಶನ್‌ನ ಸಂಸ್ಥಾಪಕ ಅಧ್ಯಕ್ಷ ಮಲ್ಲಿಕಾರ್ಜುನ ರಡ್ಡೇರ ಅವರು 'ವಿಷಮುಕ್ತ ಆಹಾರ-ರೋಗಮುಕ್ತ ಪರಿವಾರ' ಕುರಿತು ಉಪನ್ಯಾಸ ನೀಡುವರು. ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ಆರೋಗ್ಯಲೋಕದ ಅಧ್ಯಕ್ಷ ಬಸವರಾಜ ಸಂಗಪ್ಪಶೆಟ್ಟರ ಮಾತನಾಡಿ, ಈ ಶಿಬಿರ ಸಂಪೂರ್ಣವಾಗಿ ಉಚಿತವಾಗಿದ್ದು, ಕೇವಲ 50 ಜನರಿಗೆ ಅವಕಾಶವಿದೆ. ಪ್ರತಿದಿನ ಮುಂಜಾನೆ 6ರಿಂದ 7.15ರವರೆಗೆ ನಿಸರ್ಗ ಚಿಕಿತ್ಸೆ, ಪ್ರಾಣಾಯಾಮ, ಮುದ್ರಾ, ಯೋಗಾಸನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಲಕ್ಷ್ಮೇಶ್ವರ ತಾಲೂಕಾ ವೈದ್ಯರ ಸಂಘ, ಈಶ್ವರೀಯ ಆರೋಗ್ಯ ಲೋಕ ಮತ್ತು ಈಶ್ವರೀಯ ವಿಶ್ವವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿದ್ದು, ಆಸಕ್ತರು ಪಾಲ್ಗೊಳ್ಳುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ವೈದ್ಯರಾದ ಡಾ. ಎಸ್.ಜಿ ಹೂವಿನ, ಡಾ. ಪ್ರಸನ್ನ ಕುಲಕರ್ಣಿ, ಡಾ. ಅಮರೇಶ ಅಮರಶೆಟ್ಟಿ, ಡಾ. ಶೃತಿ ಹೂವಿನ ಮುಂತಾದವರಿದ್ದರು.

# ಡಾ.ಗಿರಡ್ಡಿ ಕನ್ನಡದ ಶ್ರೇಷ್ಠ ವಿಮರ್ಶಕರು



■ವಿಜಯಸಾಕ್ಷಿ ಸುದ್ದಿ, ಗದಗ

ಸೃಜನಶೀಲ ಸಾಹಿತ್ಯ ಹಾಗೂ ವಿಮರ್ಶೆ ಎರಡರಲ್ಲೂ ಡಾ. ಗೋವಿಂದರಾಜ ಗಿರಡ್ಡಿ ಕೊಡುಗೆ ಅಪಾರ. ನವ್ಯ ಸಾಹಿತ್ಯ ಯುಗದ ಪ್ರಥಮ ಪಂಕ್ತಿಗೆ ಸೇರುವ ಕನ್ನಡದ ಶ್ರೇಷ್ಠ ವಿಮರ್ಶಕ ಡಾ.ಗಿರಡ್ಡಿ ಗೋವಿಂದರಾಜ ಎಂದು ಎಂದು ಉಪನ್ಯಾಸಕ ಬಸವರಾಜ ಪಲ್ಲೇದ ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕಾ ಘಟಕ ರೋಣ ಹಾಗೂ ಸರಕಾರಿ ಪ್ರೌಢಶಾಲೆ ಅಬ್ಬಿಗೇರಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಡಾ. ಗಿರಡ್ಡಿ ಗೋವಿಂದರಾಜ್ ಜನ್ಮದಿನದ ಪ್ರಯುಕ್ತ ನಡೆದ ವಿಶೇಷ ಉಪನ್ಯಾಸ ಮಾಲಿಕೆ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಪ್ರಾಸ್ತಾವಿಕವಾಗಿ ಮಾತಾಡಿದ ಗುರುನಾಥ ಅವರಡ್ಡಿ, ಗಿರಡ್ಡಿಯವರ ಸಾಹಿತ್ಯ ಕೃತಿಗಳ ಅಧ್ಯಯನವೇ ಒಂದು ವಿಶಿಷ್ಟ ಅನುಭವ ಎನಿಸುತ್ತಿತ್ತು. ಅವರ ಕೃತಿಗಳ ಅಧ್ಯಯನದಿಂದ ಭಾವನಾ ಲೋಕದ ವಾತಾವರಣ ಸೃಷ್ಟಿಯಾಗಿಬಿಡುತ್ತದೆ. ಅವರದು ಸರಳವಾದ ವ್ಯಕ್ತಿತ್ವ, ಯಾರೊಡನೆಯೇ ಆಗಲಿ ಯಾವುದೇ ಹಮ್ಮು ಬಿಗುಮಾನಗಳಿಲ್ಲದೆ ಬೆರೆಯುತ್ತಿದ್ದ ಮನೋಭಾವ ಎಂದರು. ರೋಣ ತಾಲೂಕಾ ಕಸಾಪ ಅಧ್ಯಕ್ಷ ರಮಾಕಾಂತ ಕಮತರ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪಿ.ಎಚ್ ಕಡಿವಾಲ, ವಿ.ಕೆ ಪಾಟೀಲ, ವಿ.ಬಿ ಪಾಟೀಲ, ಶಾಲಾ ಮುಖ್ಯೋಪಾಧ್ಯಾಯ ರಾಮು ಚೌಹಾಣ, ಸವಿತಾ ಬಂಡ್ರಿ, ಪ್ರಕಾಶ ಮಡಿವಾಳರ, ರೇಣುಕಾ ಗೌಡರ, ರತ್ನಮ್ಮ ಪವಾಡಶೆಟ್ಟರ, ರಾಚಪ್ಪ ಗೋಡಚಪ್ಪನವರ, ರೇಣುಕಾ ಕೆಲೂರ, ಗೀತಾಂಜಲಿ ಮಡಿವಾಳರ ಮುಂತಾದವರು ಉಪಸ್ಥಿತರಿದ್ದರು. ಸಾಜಿದಾ ಬೇಗಂ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ಕರ್ನಾಟಕ ಪ್ರಜಾಪರ ವೇದಿಕೆಗೆ ನೇಮಕ

■ವಿಜಯಸಾಕ್ಷಿ ಸುದ್ದಿ, ಗದಗ



ಕರ್ನಾಟಕ ಪ್ರಜಾಪರ ವೇದಿಕೆಯ ರಾಜ್ಯ ಅಧ್ಯಕ್ಷರಾದ ಕನ್ನಡಿಗರ ಶಫಿ ಹಾಗೂ ಗದಗ ಜಿಲ್ಲಾ ಅಧ್ಯಕ್ಷರಾದ ರಫೀಕ್ ಧಾರವಾಡ ಇವರ ಸೂಚನೆಯಂತೆ ಗದಗ ಜಿಲ್ಲಾ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರಾಗಿ ಅಬ್ದುಲ್ ಸಾಬ್ ಮಹಮ್ಮದ್ ಅಣ್ಣಿಗೇರಿ ನೇಮಕಗೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

### ದಸರಾ ಆಚರಣೆಯ ಕುರಿತು ಪೂರ್ವ ಸಿದ್ಧತಾ ಸಭೆಯಲ್ಲಿ ಸಚಿವ ಮಹದೇವಪ್ಪ

# ದಸರಾ ಆಚರಣೆ ಕಾರ್ಯಕ್ರಮದಲ್ಲಿ ಉತ್ತಮ ಸಂದೇಶ ಇರಲಿ



■ವಿಜಯಸಾಕ್ಷಿ ಸುದ್ದಿ, ಮೈಸೂರು

ದಸರಾ ಆಚರಣೆಯಲ್ಲಿ ಹಮ್ಮಿಕೊಳ್ಳುವ ಪ್ರತಿಯೊಂದು ಕಾರ್ಯಕ್ರಮವು ಸಮಾಜಕ್ಕೆ ಉತ್ತಮ ಸಂದೇಶ ನೀಡುವಂತೆ ಇರಬೇಕು. ಈ ಬಾರಿ ಅದ್ದೂರಿಯಲ್ಲದ ಹಾಗೂ ಸರಳವೂ ಅಲ್ಲದ ಸಾಂಪ್ರದಾಯಿಕ ದಸರಾ ಆಚರಣೆ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಹೆಚ್. ಸಿ ಮಹದೇವಪ್ಪ ತಿಳಿಸಿದರು.

ಮೈಸೂರು ಅರಮನೆಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ದಸರಾ ಆಚರಣೆಯ ಕುರಿತು ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳು ನಮ್ಮ ಪರಂಪರೆಯನ್ನು ಬಿಂಬಿಸುವ ರೀತಿ ಇರಬೇಕು. ಕವಿಗೋಷ್ಠಿಯಲ್ಲಿ ಸಂವಿಧಾನ, ಗಣರಾಜ್ಯ, ಕರ್ನಾಟಕ ಏಕೀಕರಣ, ಮೈಸೂರು ಅರಸರ ಬಗ್ಗೆ ಮಾಹಿತಿ ನೀಡುವ ಜೊತೆಗೆ ಹಾಸ್ಯ ಬರಿತವಾಗಿ ಇರಬೇಕು. ಆಹಾರ ಮೇಳದಲ್ಲಿ ದೇಶೀಯ ಆಹಾರ ಪದ್ಧತಿಯ ಆಹಾರಗಳನ್ನು ನೀಡಬೇಕು, ಅಲ್ಲದೆ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಪ್ಲಾಸ್ಟಿಕ್ ಮುಕ್ತ ದಸರಾ ಆಚರಣೆ ಮಾಡಬೇಕು. ದಸರಾ ಚಲನ ಚಿತ್ರೋತ್ಸವದಲ್ಲಿ ಸಾಮಾಜಿಕ ಸಂದೇಶ ಸಾರುವ ಚಿತ್ರಗಳನ್ನು ಪ್ರದರ್ಶನ ಮಾಡಬೇಕು. ಯುವ ನಿರ್ದೇಶಕರಿಗೆ ಉತ್ತೇಜನ ನೀಡುವಂತೆ ಇರಬೇಕು. ಕಿರು ಚಿತ್ರಗಳ ಸ್ಪರ್ದೆ ಏರ್ಪಡಿಸಬೇಕು ಎಂದು ತಿಳಿಸಿದರು.

ಫಲಪುಷ್ಪ ಪ್ರದರ್ಶನ ಆಕರ್ಷಣೀಯವಾಗಿ ಇರಬೇಕು. ಹಣ್ಣು ಮೇಳದಲ್ಲಿ ದೇಶದ ವಿವಿಧ ಭಾಗಗಳಲ್ಲಿ ಬೆಳೆಯುವ ಹಣ್ಣುಗಳ ಪ್ರದರ್ಶನ ಆಗಬೇಕು. ರೈತರಿಂದ ನೇರವಾಗಿ ಹಣ್ಣುಗಳ ಖರೀದಿ ಆಗಬೇಕು ಎಂದರು. ಜಿಲ್ಲಾಧಿಕಾರಿಗಳಾದ ಡಾ. ಕೆ ವಿ ರಾಜೇಂದ್ರ ಮಾತನಾಡಿ, ವಿವಿಧ ಜಿಲ್ಲೆಗಳಿಂದ ಸ್ತಬ್ಧ ಚಿತ್ರಗಳು ಬರುತ್ತವೆ. ದಸರಾ ಆಚರಣೆಯ ಮೊದಲ ದಿನವೇ ಎಲ್ಲಾ ಸ್ಟಾಲ್‌ಗಳು ತೆರೆಯಬೇಕು. ಪಾರ್ಕಿಂಗ್ ವ್ಯವಸ್ಥೆ ಸಮರ್ಪಕವಾಗಿ ಇರಬೇಕು ಎಂದು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ ಎಂ ಗಾಯತ್ರಿ, ಮೈಸೂರು ನಗರ ಪೊಲೀಸ್ ಆಯುಕ್ತರಾದ ಬಿ ರಮೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಅಪರ ಜಿಲ್ಲಾಧಿಕಾರಿ ಶಿವರಾಜ್, ದಸರಾ ಉಪಸಮಿತಿಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಮೃತ ವ್ಯಕ್ತಿಯ ನೇತ್ರದಾನಕ್ಕೆ ಸ್ಪಂದನೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ವಕೀಲ ಚಾಳದ ನಿವಾಸಿ ಕೇಶವ ದೇವಣ್ಣ ಕಾಮತ (85) ಶನಿವಾರ ಬೆಳಿಗ್ಗೆ ನಿಧನರಾದರು. ಗದಗ–ಬೆಟಗೇರಿ ಲಯನ್ಸ್ ಕ್ಲಬ್‌ನ ಪದಾಧಿಕಾರಿಗಳು ಕಾಮತ್ ಕುಟುಂಬದವರಿಗೆ ಸಾಂತ್ವನ ಹೇಳಿ, ಮೃತರ ನೇತ್ರದಾನಕ್ಕೆ ಪ್ರೇರಣೆ ನೀಡಿ, ಸಮ್ಮತಿ ಪಡೆದುಕೊಂಡರು. ಹುಬ್ಬಳ್ಳಿಯ ಜೋಷಿ ನೇತ್ರಾಲಯದ ತಜ್ಞ ಸಿಬ್ಬಂದಿ ನಗರಕ್ಕೆ ಆಗಮಿಸಿ, ನೇತ್ರದಾನದ ಪ್ರಕ್ರಿಯೆ ಪೂರ್ಣಗೊಳಿಸಿ ನೇತ್ರಗಳನ್ನು ಪಡೆದುಕೊಂಡರು.



ನೇತ್ರದಾನ ಮಾಡಿ ಅಂಧರ ಬಾಳಿಗೆ ಬೆಳಕಾಗಲು ಸಹಕಾರ ನೀಡಿದ ಕುಟುಂಬದ ಹರೀಶ ಮತ್ತು ದಿನೇಶ್ ಕಾಮತ್ ಕುಟುಂಬ ವರ್ಗವನ್ನು ಕ್ಲಬ್ ಶ್ಲಾಘಿಸಿದೆ. ಈ ಸಂದರ್ಭದಲ್ಲಿ ಕ್ಲಬ್ ಅಧ್ಯಕ್ಷ ರಮೇಶ ಶಿಗ್ಲಿ, ದತ್ತೂಸಾ ಬೇವಿನಕಟ್ಟಿ, ಶ್ರೀನಿವಾಸ ಬಾಕಳೆ, ರಾಜು ವೇರ್ಣೆಕರ ಸೇರಿದಂತೆ ಕ್ಲಬ್‌ನ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.

'ಆಯುಷ್ಮಾನ ಭವ –ಆಯುಷ್ ಆರೋಗ್ಯ ಮೇಳ'ದಲ್ಲಿ ಡಾ. ಸಾಯಿಪ್ರಕಾಶ ಮಡಿವಾಳರ ಅಭಿಮತ

# ಪಂಚಕರ್ಮದ ಮೂಲಕ ರೋಗಗಳನ್ನು ತಡೆಗಟ್ಟಬಹುದು

■ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಆಯುರ್ವೇದದ ಪ್ರಕಾರ ಮನುಷ್ಯರಲ್ಲಿ ರೋಗಗಳುಂಟಾಗಲು ಆಹಾರ, ಆಹಾರದ ಕ್ರಮ, ವಿಹಾರ ಮುಖ್ಯ ಕಾರಣವಾಗಿದೆ. ನಿಯಮಿತ, ಸಮುಚಿತ ಆಹಾರ–ವಿಹಾರಗಳಿಂದ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಸೊರಟೂರು ಆಯುಷ್ಮಾನ್ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ವೈದ್ಯಾಧಿಕಾರಿ ಡಾ. ಸಾಯಿಪ್ರಕಾಶ ಮಡಿವಾಳರ ಹೇಳಿದರು.

ಇಲ್ಲಿಯ ಅನ್ನದಾನೀಶ್ವರ ಸಮುದಾಯ ಭವನದಲ್ಲಿ ಸರಕಾರಿ ಆಯುರ್ವೇದ ಚಿಕಿತ್ಸಾಲಯ, ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಪಾಪನಾಶಿ ಇವರು ಹಮ್ಮಿಕೊಂಡಿದ್ದ 'ಆಯುಷ್ಮಾನ ಭವ –ಆಯುಷ್ ಆರೋಗ್ಯ ಮೇಳ' ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ನಮ್ಮ ಆರೋಗ್ಯಕ್ಕೆ ಹಾಗೂ ಅನಾರೋಗ್ಯಕ್ಕೆ ಶರೀರವನ್ನು ಪ್ರತಿನಿಧಿಸುವ ವಾತ, ಪಿತ್ತ ಕಫಗಳೆಂಬ ಅಂಶಗಳು ನೈಸರ್ಗಿಕ ಬದಲಾವಣಿಗಳಿಂದ ಏರು ಪೇರು ಆದರೆ ಅನಾರೋಗ್ಯ ಉಂಟಾಗುತ್ತದೆ. ಆದ್ದರಿಂದ ದೇಹದಲ್ಲಿ ಅನಾವಶ್ಯಕ ಅಂಶಗಳನ್ನು ಆಯುರ್ವೇದದ ಪಂಚಕರ್ಮದ ಮೂಲಕ ಹೊರಹಾಕುವುದರಿಂದ ಬರಲಿರುವ ರೋಗಗಳನ್ನು ತಡೆಗಟ್ಟಬಹುದು ಎಂದು ಸಲಹೆ ನೀಡಿದರು.



ಯೋಗ ಶಿಕ್ಷಕರಾದ ಸುಧಾ ಪಾಟೀಲ ಮತ್ತು ಶೋಭಾ ದೊಡ್ಡವಾಡ ಶಿಬಿರಾರ್ಥಿಗಳಿಗೆ ಸರಳ ಯೋಗವನ್ನು ಹೇಳಿಕೊಟ್ಟರು. ಯುವಕರು ರಕ್ತದಾನ ಮಾಡಿದರು. ಪಾಪನಾಶಿಯ ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ವೈದ್ಯಾಧಿಕಾರಿ ಡಾ. ಅಶೋಕ ಮತ್ತಿಗಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಬಿರದಲ್ಲಿ ನೂರಕ್ಕೂ ಹೆಚ್ಚು ರೋಗಿಗಳು ತಪಾಸಣೆಗೊಳಪಟ್ಟು ಚಿಕಿತ್ಸೆ ಪಡೆದುಕೊಂಡರು. ಗ್ರಾ.ಪಂ ಮಾಜಿ ಅಧ್ಯಕ್ಷ ಎಸ್.ಎಂ ಬೂದಿಹಾಳ ಅಧ್ಯಕ್ಷತೆ ವಹಿಸಿದ್ದರು. ಡಾ ಮೀನಾಕ್ಷಿ ಮತ್ತಿಗಟ್ಟಿ ಉಪಸ್ಥಿತರಿದ್ದರು.

ಅಸುಂಡಿಯ ಹೋಮಿ ಯೋಪಥಿಕ್ ವೈದ್ಯರಾದ ಡಾ. ಸಂಜೀವ ನಾರಪ್ಪನವರ ಮಾತನಾಡಿ, ಆಯುರ್ವೇದ ಮತ್ತು ಹೋಮಿಯೋಪಥಿಕ್ ಔಷಧಿಗಳು ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ಮಾತ್ರ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ, ರೋಗಗಳು ವಾಸಿಯಾಗುತ್ತವೆ ಎಂದರು.

ಚಿಕ್ಕಹಂದಿಗೋಳದ ಸರಕಾರಿ ಆಯುರ್ವೇದ ಚಿಕಿತ್ಸಾ ಕೇಂದ್ರದ ವೈದ್ಯಾಧಿಕಾರಿ ಕಮಲಾಕರ ಅರಳೆ ಅವರು ಮಾತನಾಡಿ, ಕರ್ನಾಟಕ ಸರಕಾರದ ಆಯುಷ್ ಇಲಾಖೆಯು ಲಕ್ಕುಂಡಿ ಗ್ರಾಮದಲ್ಲಿ ಕೊರೋನಾ ರೋಗದ ಸಂದರ್ಭದಲ್ಲಿ ಹಲವು ಔಷಧಿಗಳನ್ನು ವಿತರಿಸಿ, ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿದೆ. ಇದರೊಂದಿಗೆ ಉಚಿತ ಆರೋಗ್ಯ ಶಿಬಿರ, ಮನೆ ಮದ್ದು ಶಿಬಿರ, ಶಾಲಾ ಮಕ್ಕಳ ಶಿಬಿರ ಏರ್ಪಡಿಸಿದೆ. ರಾಜ್ಯದಲ್ಲಿಯೇ ಜಿಮ್ಸ್ ಸಂಯುಕ್ತ ಆಸ್ಪತ್ರೆಯು ಮೊದಲ ಸ್ಥಾನದಲ್ಲಿದ್ದು, ಪಂಚಕರ್ಮ ಪದ್ಧತಿಯಿಂದ ರೋಗವನ್ನು ವಾಸಿ ಮಾಡಲಾಗುತ್ತಿದೆ ಎಂದರು.

ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗಲು ವೈದ್ಯರ ಸಲಹೆಯ ಮೇರೆಗೆ ರಕ್ತದಾನ ಮಾಡಬೇಕು. ಇದರಿಂದ ರಕ್ತದೊತ್ತಡ, ಡಯಾಬಿಟಿಸ್ ಸೇರಿದಂತೆ ಇತರೆ ಕಾಯಿಲೆಗಳಿಂದ ದೂರವಿರಬಹುದು ಎಂದು ಡಾ ದತ್ತು ವೈಕುಂಠೆ ಸಲಹೆ ನೀಡಿದರು. ಬಿದರಳ್ಳಿ ವೈದ್ಯಾಧಿಕಾರಿ ಡಾ. ನೇತ್ರಾವತಿ ರಾಯ್ಕರ ಮಹಿಳೆಯರ ಆರೋಗ್ಯ ರಕ್ಷಣೆಯ ಸೂತ್ರಗಳ ಕುರಿತು ವಿವರಿಸಿದರು.

# ಸಾಧಕ ಕುಸ್ತಿ ಪಟುಗಳಿಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ಜೈ ಹನುಮನ ಗರಡಿ ಟ್ರಸ್ಟ್ ಕಮಿಟಿ ಗದಗ ವತಿಯಿಂದ ರಾಷ್ಟ್ರಮಟ್ಟದ ಹಾಗೂ ರಾಜ್ಯಮಟ್ಟದ ಕುಸ್ತಿ ಪಟುಗಳಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಮಾರಂಭದ ಅಧ್ಯಕ್ಷತೆಯನ್ನು ರಾಮಣ್ಣ ಜಿ.ಫಲದೊಡ್ಡಿ ವಹಿಸಿದ್ದರು. ಅತಿಥಿಗಳಾಗಿ ಹನಮನ ಗರಡಿ ಟ್ರಸ್ಟ್ ಕಮಿಟಿ ಅಧ್ಯಕ್ಷ ಪರಪ್ಪ ಎಫ್. ಕಮತರ, ಉಪಾಧ್ಯಕ್ಷ ಪ್ರಶಾಂತ ಎಸ್.ಶಾಬಾದಿಮಠ, ಸದಸ್ಯ ಫಕೀರಪ್ಪ ಹೆಬಸೂರ ಪಾಲ್ಗೊಂಡಿದ್ದರು.

69 ಕೆ.ಜಿ ವಿಭಾಗದಲ್ಲಿ ಬಂಗಾರದ ಪದಕ ಪಡೆದ ವಿಡಿಎಸ್‌ಸಿ ವಿದ್ಯಾರ್ಥಿನಿ ರಾಧಿಕಾ ತೊಂಡಿಹಾಳ, 50 ಕೆ.ಜಿ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದ ವರಲಕ್ಷ್ಮೀ ಕದಡಿ, 61 ಕೆ.ಜಿ ವಿಭಾಗದಲ್ಲಿ ಬಂಗಾರದ ಪದಕ ಪಡೆದ ಭುವನೇಶ್ವರಿ, 46 ಕೆ.ಜಿ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದ ವೈಷ್ಣವಿ ಮಿಡಿಯವರ, 46 ಕೆ.ಜಿ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದ ರಾಹುಲ ವಿ.ಸಿದ್ದಮ್ಮನಹಳ್ಳಿ ಹಾಗೂ ತರಬೇತುದಾರರಾದ ವಿನಾಯಕ ಇವರನ್ನು ಜೈ ಹನುಮನ ಗರಡಿ ಟ್ರಸ್ಟ್ ಕಮಿಟಿ ವತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕಮಿಟಿಯ ಸರ್ವ ಸದಸ್ಯರು, ಓಣಿಯ ಗುರು–ಹಿರಿಯರು, ಯುವಕರು, ಕ್ರೀಡಾಭಿಮಾನಿಗಳು ಹಾಗೂ ಮಾಜಿ ಕುಸ್ತಿಪಟುಗಳು ಉಪಸ್ಥಿತರಿದ್ದರು.

# ಸತ್ಯನಾರಾಯಣ ಪೂಜೆ, ಅನ್ನ ಸಂತರ್ಪಣೆ ಸೆ.25ಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ನಗರದ ಶ್ರೀ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ ಮಾರುಕಟ್ಟೆ ಪ್ರಾಂಗಣ, ಎಪಿಎಂಸಿ ಯಾರ್ಡ್‌ನಲ್ಲಿ ಶ್ರೀ ಗಜಾನನೋತ್ಸವ ಸಮಿತಿ ವತಿಯಿಂದ ಗಣೇಶ ಹಬ್ಬದ ಪ್ರಯುಕ್ತ ಸೆ.25ರಂದು ಬೆಳಿಗ್ಗೆ 8ರಿಂದ 9 ಗಂಟೆಯವರಗೆ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ನೆರವೇರಲಿದೆ.

ಬೆಳಿಗ್ಗೆ 10 ಗಂಟೆಗೆ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಲಿದ್ದು, ಕೊಪ್ಪಳದ ಗವಿಸಿದ್ಧೇಶ್ವರ ಮಠದ ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ಮಹಾ ಅನ್ನ ಸಂತರ್ಪಣೆಗೆ ಚಾಲನೆ ನೀಡಿ ಆಶೀರ್ವಚನ ನೀಡಲಿದ್ದಾರೆ.

ಕಾರ್ಯಕ್ರಮದ ಸಮ್ಮುಖವನ್ನು ಸುಕ್ಷೇತ್ರ ಬಳಗಾನೂರ ಪ.ಪೂ.ಶ್ರೀ ಶಿವಶಾಂತವೀರ ಶರಣರು ಹಾಗೂ ಗದಗ ವೀರೇಶ್ವರ ಪುಣ್ಯಾಶ್ರಮದ ಪ.ಪೂ ಶ್ರೀ ಕಲ್ಲಯ್ಯಜ್ಜನವರು ವಹಿಸಲಿದ್ದಾರೆ.

ಗಜಾನನ ಉತ್ಸವ ಸಮಿತಿಯ ಅಧ್ಯಕ್ಷರು, ಪದಾಧಿಕಾರಿಗಳು, ಸರ್ವ ಸದಸ್ಯರು ಹಾಗೂ ಎಪಿಎಂಸಿ ಯಾರ್ಡ್‌ನ ಗಣ್ಯ ವರ್ತಕರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮಹಾ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಭಕ್ತರು, ಸಾರ್ವಜನಿಕರು ಭಾಗವಹಿಸಿ ಶ್ರೀಗಳ ದರ್ಶನ ಆಶೀರ್ವಚನ ಕೇಳಿ, ಗಣೇಶನ ಕೃಪೆಗೆ ಪಾತ್ರರಾಗಬೇಕೆಂದು ಸಮಿತಿಯ ಅಧ್ಯಕ್ಷರು, ಪದಾಧಿಕಾರಿಗಳು ಪತ್ರಿಕಾ ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.

# ರಾಜ್ಯ ಕಲಾ ಭೂಷಣ ಪ್ರಶಸ್ತಿ ಪ್ರದಾನ

■ವಿಜಯಸಾಕ್ಷಿ ಸುದ್ದಿ, ಮುಳಗುಂದ



ಪಟ್ಟಣದ ನಾಗಾವಿ ತಾಂಡಾ ಗ್ರಾಮದ ಜನಪದ ಗಾಯಕ ಸಂತೋಷ ನಾರಾಯಣ ಪವಾರ ಅವರಿಗೆ ಧಾರವಾಡ ರಂಗಾಯಣ ಭವನದಲ್ಲಿ ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಅಂಗವಾಗಿ ಜರುಗಿದ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಸರಕಾರಿ ಹಾಗೂ ಅರೆ ಸರಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ 'ರಾಜ್ಯ ಕಲಾ ಭೂಷಣ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಬಾಗಲಕೋಟೆಯ ಪರಶುರಾಮ ಮಾಹಾರಾಜರು ವಹಿಸಿದ್ದರು. ಡಾ. ಎಂ.ರಾಮಚಂದ್ರ, ಡಾ. ಡಿ.ವಿಶ್ವನಾಥ, ಎನ್.ಎಲ್ ರಾಠೋಡ, ರತ್ನಾ ಬದಿ, ಶೀಲಾ ಮೇಸ್ತ, ಎನ್.ಕೆ ಚವ್ಹಾಣ ಇದ್ದರು.

# ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಸರಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘ (ಮೇವಾ) ಗದಗ ಜಿಲ್ಲಾ ಘಟಕವು ಸೆ. 24ರಂದು ಮುಂಜಾನೆ 10.30 ಗಂಟೆಗೆ ಗದಗ–ಮುಂಡರಗಿ ರಸ್ತೆಯ (ಎಸ್‌ಬಿಎಸ್ ಗಾರ್ಡನ್ ಬಳಿ) ಕೃಷಿ ಸಂಶೋಧನಾ ಕೇಂದ್ರದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಏರ್ಪಡಿಸಿದೆ.

2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಡೆಯಲಿರುವ ಈ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಸಾನ್ನಿಧ್ಯವನ್ನು ಗದುಗಿನ ಅಡವೀಂದ್ರ ಸ್ವಾಮಿ ಮಠದ ಧರ್ಮದರ್ಶಿ ಪೂಜ್ಯ ಮಹೇಶ್ವರ ಸ್ವಾಮೀಜಿ ವಹಿಸುವರು. ಗದುಗಿನ ಕ್ವೆಸ್ಟ್ ಫೌಂಡೇಶನ್‌ನ ಕಾರ್ಯನಿರ್ವಾಹಕ ನಿರ್ದೇಶಕ ಮುಹಮ್ಮದ ಮನ್ಸೂರ ಅಲ್ ಖಾದ್ರಿ ಉಪಸ್ಥಿತರಿರುವರು.

ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೃಷ್ಣಗೌಡ ಪಾಟೀಲ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಮೇವಾ ಸಂಘಟನೆಯ ಅಬ್ದುಲ್‌ರಹೀಮ ಖಾಜಿ, ಸಲೀಂ ಅಹ್ಮದ ಹಂಚಿನಮನಿ, ಡಾ.ಇಸ್ಮಾಯಿಲ್ ಪಾಷಾ, ಅಬ್ದುಲ್‌ಖಾದರ ಮೆಣಸಗಿ, ಗಣ್ಯರಾದ ಹುಮಾಯೂನ ಮಾಗಡಿ, ಡಾ.ಪ್ಯಾರಅಲಿ ನೂರಾನಿ, ಅಬ್ದುಲ್‌ರಜಾಕ ಡಂಕೇದ, ನೂರುಲ್ಲಾಖಾನ, ಶ್ರೀಮತಿ ಫರಹತ ಜಲಗೇರಿ, ಮೋದಿನಸಾಬ ಬುಕ್ಕಿಟಗಾರ ಆಗಮಿಸುವರು.

ಮೇವಾ ಗದಗ ಜಿಲ್ಲಾ ಅಧ್ಯಕ್ಷ ಡಾ. ಸಿ.ಎಂ ರಫಿ ಅಧ್ಯಕ್ಷತೆ ವಹಿಸುವರು.

ವಿಶೇಷ ಆಹ್ವಾನಿತರಾಗಿ ರಿಜ್ವಾನ ಕೌಲಗೇರಿ, ಎಂ.ಜೆ ನದಾಫ, ಶಬ್ಬೀರ ಮುಲ್ಲಾ ಆಗಮಿಸುವರು ಎಂದು ಪ್ರಧಾನ ಕಾರ್ಯದರ್ಶಿ ರಶೀದ್ ತಿಳಿಸಿದ್ದಾರೆ.

# ಅನ್ನದಾನವೇ ಶ್ರೇಷ್ಠವಾದ ದಾನ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಅನ್ನದಾನಕ್ಕಿಂತ ಮಿಗಿಲಾದ ದಾನ ಬೇರೊಂದಿಲ್ಲ. ಅನ್ನದಾನವೇ ಶ್ರೇಷ್ಠವಾದ ದಾನವಾಗಿದೆ ಎಂದು ಗದಗ ತಾ.ಪಂ ಮಾಜಿ ಅಧ್ಯಕ್ಷ ಎಸ್.ಎಸ್ ಪಾಟೀಲ್ ಹೇಳಿದರು.

ಸಮೀಪದ ಕಣವಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರಾವಣ ಮಾಸದ ಪ್ರಯುಕ್ತ ಹಮ್ಮಿಕೊಂಡಿದ್ದ ಅಮೃತ ಭೋಜನ–ಅಮೃತ ಕಲಿಕೆ ಯೋಜನೆಯಡಿ ಪ್ರಸಾದ ಸೇವೆ ನೀಡಿದ ಮಹನೀಯರನ್ನು ಸನ್ಮಾನಿಸಿ ಮಾತನಾಡಿದರು.

ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ ನಡುವಿನಮನಿ ಮಾತನಾಡಿ, ಅಮೃತ ಯೋಜನೆ–ಅಮೃತ ಕಲಿಕೆಯಿಂದ ಶಾಲಾ ಮಕ್ಕಳ ಹಾಜರಾತಿಯೊಂದಿಗೆ ಮಕ್ಕಳ ಕಲಿಕೆಯೂ ಯಶಸ್ವಿಯಾಗಿದ್ದು, ಗ್ರಾಮಸ್ಥರ, ಎಸ್‌ಡಿಎಂಸಿ, ಶಿಕ್ಷಕರ ಸಹಕಾರದಿಂದ ಸರಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟ ಮತ್ತಷ್ಟು ಉತ್ತಮವಾಗುತ್ತದೆ ಎಂದರು.

ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಶಂಕ್ರಪ್ಪ ಕೋಳಿವಾಡ, ಪ್ರಧಾನ ಗುರು ಎಂ.ಜಿ ಮಿರ್ಜಿ, ಎಲ್.ಪಿ ಕಟ್ಟಿಮನಿ, ಹರ್ತಿ ಸಿಆರ್‌ಪಿ ಇಮಾಮಸಾಬ ಗಾಡಗೋಳಿ, ಸುವರ್ಣಾ ಚವಡಿ, ಜಯಶ್ರೀ ಶ್ರೀಗೀರಿ, ಕೆ.ಟಿ ಮೀರಾನಾಯಕ, ಜೆ.ಎ ಭಾವಿಕಟ್ಟಿ, ಟಿ.ಆರ್ ಹೊಂಬಳ, ಆರ್.ಎಂ ಗುಂಜಳ, ಆರ್.ಬಿ ಕಟ್ಟಿಮನಿ, ಎನ್.ವಿ ಗಿರೆಡ್ಡಿ, ಎಸ್.ಎಚ್ ಹೊಸಮನಿ, ವಾಯ್.ಬಿ ಗೋವಣ್ಣವರ, ಸಲ್ಮಾ ಮಾರ್ಚಂಟ್ ಇದ್ದರು.

ಮುಂಡರಗಿ ಪಟ್ಟಣದ ಪುರಸಭೆ ಕಾರ್ಯಾಲಯದಲ್ಲಿ ಶನಿವಾರ ಡಾ. ಬಿ.ಆರ್ ಅಂಬೇಡ್ಕರ ಹಾಗೂ ಪೌರ ಕಾರ್ಮಿಕರ ಸಂಘಟನೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪೌರಕಾರ್ಮಿಕರ ದಿನಾಚರಣೆ ಆಚರಿಸಲಾಯಿತು. ಪುರಸಭೆ ಮುಖ್ಯಾಧಿಕಾರಿ ನೂರುಲ್ಲಾಖಾನ ಮಾತನಾಡಿದರು. ಈ ಸಂದರ್ಭದಲ್ಲಿ ಎಂ.ಬಿ ಮ್ಯಾಗೇರಿ, ಬಸವರಾಜ ಕೊಳ್ಳೂರ, ರವಿ ಕುಂಬಾರ, ರವಿಚಂದ್ರ ಬೆನಕಪ್ಪ, ಶಿವಲಿಂಗಪ್ಪ ತಾಂಬ್ರಗುಂಡಿ, ಎಂ.ಡಿ ದೊಡ್ಡಮನಿ, ಮುದ್ದಕಪ್ಪ ಬಚೇನಳ್ಳಿ, ಕರಿಸಿದ್ದಪ್ಪ ಹರಿಜನ, ಕೃಷ್ಣ ಪಾಟೀಲ, ಉಮೇಶ ಬ್ಯಾಲವಾಡಗಿ ಉಪಸ್ಥತರಿದ್ದರು.



# ಲೋಕ ಕಲ್ಯಾಣಕ್ಕಾಗಿ ಗಣಹೋಮ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಶ್ರೀ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ ಮಾರುಕಟ್ಟೆ ಪ್ರಾಂಗಣ, ಎಪಿಎಂಸಿ ಯಾರ್ಡ್‌ನಲ್ಲಿ ಶ್ರೀ ಗಜಾನನ ಉತ್ಸವ ಸಮಿತಿ ವತಿಯಿಂದ ಗಣೇಶ ಹಬ್ಬದ ಪ್ರಯುಕ್ತ ಲೋಕಕಲ್ಯಾಣಕ್ಕಾಗಿ ಗಣಹೋಮ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷ ತಿಮ್ಮಣ್ಣ ಕೋನರಡ್ಡಿ, ಎಪಿಎಂಸಿಯ ಎಲ್ಲಾ ವರ್ತಕರ ನಿರ್ಣಯದಂತೆ ರೈತರಿಗೆ ಎದುರಾಗಿರುವ ಸಮಸ್ಯೆಗಳು ಹಾಗೂ ಮುಂಗಾರು ಮಳೆಯ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ನಾವಿಂದು ಗಣಹೋಮ ಪೂಜೆ ಮಾಡಿದ್ದೇವೆ. ರೈತರ ಕಷ್ಟಗಳು, ವಿಘ್ನಗಳು ದೂರವಾಗಿ, ಮಳೆ–ಬೆಳೆ ಸಮೃದ್ಧವಾಗಲಿ ಎಂದು ವಿಘ್ನೇಶ್ವರನಲ್ಲಿ ಪ್ರಾರ್ಥನೆ ಸಲ್ಲಿಸಿದ್ದೇವೆ ಎಂದರು.

ಗಜಾನನ ಉತ್ಸವ ಸಮಿತಿಯ ಪದಾಧಿಕಾರಿಗಳು, ಸರ್ವ ಸದಸ್ಯರು, ಗಣ್ಯ ವ್ಯಾಪಾರಸ್ಥರು ಪಾಲ್ಗೊಂಡಿದ್ದರು.

ಅರುಣೋದಯ ವಿಶೇಷ ಅಗತ್ಯವುಳ್ಳ ಶಾಲಾ ಮಕ್ಕಳೊಂದಿಗೆ ಜನ್ಮದಿನ ಆಚರಣೆ

# ಮುತ್ತಿನಪೆಂಡಿಮಠ ಟ್ರಸ್ಟ್‌ನಿಂದ ಸಮಾಜಮುಖಿ ಕಾರ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ಗದುಗಿನ ಹಿರಿಯ ನ್ಯಾಯವಾದಿಗಳೂ, ಜನಪ್ರಿಯ ಮಾಜಿ ಶಾಸಕರೂ ಆಗಿದ್ದ ಸಿ.ಎಸ್ ಮುತ್ತಿನಪೆಂಡಿಮಠ ಅವರು ಭೌತಿಕವಾಗಿ ನಮ್ಮೊಂದಿಗೆ ಇಲ್ಲವಾದರೂ ಅವರ ಜನಪರ ಕಾರ್ಯಗಳಿಂದ ಈಗಲೂ ಎಲ್ಲರ ಮನದಲ್ಲಿ ಚಿರಸ್ಥಾಯಿಯಾಗಿದ್ದಾರೆ. ಸಿ.ಎಸ್ ಮುತ್ತಿನಪೆಂಡಿಮಠ ಪ್ರತಿಷ್ಠಾನ ಟ್ರಸ್ಟ್ ಸಮಾಜಮುಖಿ, ಜನಮುಖಿ ಕಾರ್ಯಗಳನ್ನು ಮುಂದುವರೆಸಲಿದೆ ಎಂದು ಟ್ರಸ್ಟ್ ಗೌರವಾಧ್ಯಕ್ಷ ಡಾ. ಎನ್.ಬಿ ಪಾಟೀಲ ಹೇಳಿದರು.

ಅವರು ಶನಿವಾರ ನಗರದ ಅರುಣೋದಯ ವಿಶೇಷ ಅಗತ್ಯವುಳ್ಳ ಮಕ್ಕಳ ಶಾಲೆಯಲ್ಲಿ ಟ್ರಸ್ಟ್‌ನಿಂದ ಏರ್ಪಡಿಸಿದ್ದ ಲಿಂ.ಸಿ.ಎಸ್ ಮುತ್ತಿನಪೆಂಡಿಮಠ ಅವರ 94ನೇ ಜನ್ಮದಿನೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.




ಕ್ರೀಡೆ, ಸಾಂಸ್ಕೃತಿಕ, ಸಾಹಿತ್ಯಕ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ನ್ಯಾಯಾಂಗ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹನೀಯರನ್ನು ಗೌರವಿಸುವ, ದೇಹದಾನ, ನೇತ್ರದಾನ, ರಕ್ತದಾನ, ಆರೋಗ್ಯ ತಪಾಸಣೆ ಮುಂತಾದ ಕಾರ್ಯಗಳನ್ನು ಮಾಡಲು ಟ್ರಸ್ಟ್ ಬದ್ಧತೆಯಿಂದ ಕಾರ್ಯ ನಿರ್ವಹಿಸಲಿದೆ ಎಂದರು.

ಅರುಣೋದಯ ವಿಶೇಷ ಅಗತ್ಯವುಳ್ಳ ಮಕ್ಕಳ ಶಾಲೆಯ ಮಕ್ಕಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ಹುಬ್ಬಳ್ಳಿಯ ಸೇವಾಭಾರತಿ ಟ್ರಸ್ಟ್ ಕಾರ್ಯ ನಿಜಕ್ಕೂ ಶ್ಲಾಘನೀಯವಾದದ್ದು. ಪ್ರತಿ ವರ್ಷ ತಮ್ಮ ಜನ್ಮದಿನದ ಸಂದರ್ಭದಲ್ಲಿ ಸಿ.ಎಸ್ ಮುತ್ತಿನಪೆಂಡಿಮಠ ಪ್ರತಿಷ್ಠಾನ ಟ್ರಸ್ಟ್ ಮೂಲಕ ವೈಯುಕ್ತಿಕವಾಗಿ 1 ಲಕ್ಷ ರೂ.ಗಳನ್ನು ಈ ಶಾಲೆಗೆ ನೀಡುವೆ ಎಂದರು. ಟ್ರಸ್ಟ್‌ನ ಅಧ್ಯಕ್ಷ ವಸಂತ ಮೇಟಿ ಮಾತನಾಡಿ, ಅರುಣೋದಯ ಶಾಲೆಯು ವಿಶೇಷ ಅಗತ್ಯವುಳ್ಳ ಮಕ್ಕಳ ಸೇವೆಯಲ್ಲಿ ತನ್ನನ್ನು ಸಮರ್ಪಿಸಿಕೊಂಡಿರುವದು ದೇವರ ಕಾರ್ಯಕ್ಕೆ ಸಮರ್ಪಿಸಿಕೊಂಡಂತೆ.

ಟ್ರಸ್ಟ್ ಕಾರ್ಯದರ್ಶಿ ಚಂದ್ರು ಬಾಳಿಹಳ್ಳಿಮಠ ಟ್ರಸ್ಟ್ ಸ್ಥಾಪನೆಯ ಉದ್ದೇಶ, ನಡೆದು ಬಂದ ದಾರಿಯನ್ನು ವಿವರಿಸಿ, ಮುತ್ತಿನಪೆಂಡಿಮಠ ಅವರ ಜನಪರ, ಸಮಾಜಪರ ಕಾರ್ಯಗಳನ್ನು ಟ್ರಸ್ಟ್ ಮುಂದುವರೆಸಿಕೊಂಡು ಬಂದಿದೆ. ಇಂದು 10ಕ್ಕೂ ಹೆಚ್ಚು ಜನರು ರಕ್ತದಾನ ಮಾಡುವ ಮೂಲಕ ಉದಾರತೆ ಮೆರೆದಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಗೆ ಅಧ್ಯಕ್ಷರಾಗಿ ಆಯ್ಕೆಯಾದ ಎಸ್.ಪಿ ಸಂಶಿಮಠ ಅವರನ್ನು ಸನ್ಮಾನಿಸಲಾಯಿತು. ವಿಶೇಷ ಅಗತ್ಯವುಳ್ಳ ಶಾಲಾ ಮಕ್ಕಳಿಗೆ ಸಿಹಿ ವಿತರಿಸಿ ಟ್ರಸ್ಟ್‌ನ ಪದಾಧಿಕಾರಿಗಳು, ಸದಸ್ಯರು ಶುಭ ಕೋರಿದರು.

ಈ ಕೈಂಕರ್ಯಕ್ಕೆ ಟ್ರಸ್ಟ್‌ನಿಂದ 11 ಸಾವಿರ ರೂ.ಗಳನ್ನು ನೀಡುವದಾಗಿ ಹೇಳಿ, ಚೆಕ್‌ನ್ನು ಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿ ಜಯರಾಜ ಮುಳಗುಂದ ಅವರಿಗೆ ಹಸ್ತಾಂತರಿಸಿದರು.

ವೇದಿಕೆಯ ಮೇಲೆ ಟ್ರಸ್ಟ್‌ನ ಸಹ ಕಾರ್ಯದರ್ಶಿ ಸಂಗಮೇಶ್ವರ ಬಂಗಾರಶೆಟ್ಟರ, ಖಜಾಂಚಿ ಮಲ್ಲಿಕಾರ್ಜುನ ಸಿಕ್ಕೇದೇಸಾಯಿ, ವಿಜಯಾನಂದ ಮುತ್ತಿನಪೆಂಡಿಮಠ ಉಪಸ್ಥಿತರಿದ್ದರು. ಜಯರಾಜ ಮುಳಗುಂದ ಸ್ವಾಗತಿಸಿದರು, ಶಾಲಾ ಮುಖ್ಯೋಪಾಧ್ಯಾಯ ಮಲ್ಲಪ್ಪ ಹಕ್ಕಿ ನಿರೂಪಿಸಿ ವಂದಿಸಿದರು.

ಟ್ರಸ್ಟ್ ಸದಸ್ಯರಾದ ಈಶಣ್ಣ ಮುನವಳ್ಳಿ, ಲತಾ ಮುತ್ತಿನಪೆಂಡಿಮಠ, ಪ್ರಶಾಂತ ಶಾಬಾದಿಮಠ, ಎಫ್.ಎಸ್ ಸಿಂಧಗಿ, ಶಾಲಾ ಆಡಳಿತ ಮಂಡಳಿಯ ಕೋಶಾಧ್ಯಕ್ಷ ಜೀತೇಂದ್ರ ಶಹಾ, ಸದಸ್ಯ ಬಸವರಾಜ ನಾಗಲಾಪೂರ, ಶಾಂತಯ್ಯ ಮುತ್ತಿನಪೆಂಡಿಮಠ, ಇನ್ನರ್‌ವ್ಹೀಲ್ ಕ್ಲಬ್ ಗದಗ ಮಿಡ್‌ಟೌನ್ ಅಧ್ಯಕ್ಷೆ ವಿಜಯಲಕ್ಷ್ಮೀ ಬಿರಾದಾರ, ಕಾರ್ಯದರ್ಶಿ ಪ್ರೀತಿ ಶಿವಪ್ಪಯ್ಯನಮಠ, ಸುವರ್ಣಾ ಹೊನ್ನಗುಡಿ, ಆರತಿ ಜೀರಂಕಳಿ, ಮಧುಮತಿ, ಲಲಿತಾ ಅಳವಂಡಿ, ಜಗದೀಶ ಹಡಪದ, ಜಯಶ್ರೀ ಭಾವರೆ, ರೇಣುಕಾ ದಾಸರ, ವೀಣಾ ಕೊಲ್ಲಾಪುರೆ, ಮಲ್ಲಿಕಾರ್ಜುನ ನಾಗಲಾಪೂರ ಮುಂತಾದವರಿದ್ದರು.

# ಗಣಪತಿ ಕಡೆಮನಿಗೆ 'ಡಾ. ಡಿ.ಸಿ ಪಾವಟೆ' ಪ್ರಶಸ್ತಿ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಧಾರವಾಡ ಕ.ವಿ.ವಿ. ಸ್ನಾತಕೋತ್ತರ ಪಿ.ಜಿ ಎನ್‌ಎಸ್‌ಎಸ್ ಘಟಕದ ಸ್ವಯಂ ಸೇವಕ ಗಣಪತಿ ಕಡೆಮನಿ ಕರ್ನಾಟಕ ವಿಶ್ವವಿದ್ಯಾಲಯ ಕೊಡಮಾಡುವ ಪ್ರತಿಷ್ಠಿತ 'ಡಾ. ಡಿ.ಸಿ ಪಾವಟೆ ಎನ್‌ಎಸ್‌ಎಸ್ ಅತ್ಯುತ್ತಮ ಸ್ವಯಂ ಸೇವಕ' ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಗಣೇಶ ಕಡೆಮನಿಯವರು ಎನ್‌ಎಸ್‌ಎಸ್‌ನಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಾಲಾಗಿದೆ ಎಂದು ಕರ್ನಾಟಕ ವಿಶ್ವ ವಿದ್ಯಾಲಯದ ಎನ್‌ಎಸ್‌ಎಸ್ ಸಂಯೋಜಕರಾದ ಡಾ. ಎಂ.. ದಳಪತಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಗಣಪತಿ ಕಡೆಮನಿ ಅವರಿಗೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಕೆ.ಬಿ ಗುಡಸಿ, ಹಂಪಿ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿಗಳಾದ ಡಾ. ಮಲ್ಲಿಕಾ ಘಂಟಿ, ಕುಲಸಚಿವರಾದ ಪ್ರೊ. ಚಂದ್ರಮ್ಮಾ, ಕನ್ನಡ ಅಧ್ಯಯನ ಪೀಠದ ಅಧ್ಯಕ್ಷ ಪ್ರೊ. ವಾಯ್. ಎನ್ ಮಟ್ಟಿಹಾಳ, ಎನ್‌ಎಸ್‌ಎಸ್ ಪಿ.ಜಿ ಘಟಕದ ಅಧಿಕಾರಿ ಪ್ರೊ. ಸಂಗಪ್ಪಾ ಚಲವಾದಿ, ಕರ್ನಾಟಕ ಸರ್ಕಾರದ ರಾಜ್ಯ ಎನ್‌ಎಸ್‌ಎಸ್ ಪ್ರಶಸ್ತಿ ಪುರಸ್ಕೃತ ಸಂಜಯಕುಮಾರ ಬಿರಾದಾರ ಹಾಗೂ ಶಿಕ್ಷಕರು, ಗ್ರಾಮದ ಗುರು–ಹಿರಿಯರು ಅಭಿನಂದಿಸಿ ಶುಭಹಾರೈಸಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka